ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

¸ÁA¥ÁÌ -155 Volume - 155	ಬೆಂಗಳೂರು, ಗುರುವಾರ ,17,ಸೆಪ್ಟೆಂಬರ್, 2020(¨Áz¥z, 26, ಶಕವರ್ಷ ೧೯೪2) Bengaluru, THURSDAY, 17, SEPTEMBER, 2020(Bhadrapada,26, ShakaVarsha 1942)	¸ÁaP 38 Issue 38

¨ÁUÀ¼J

gÁdzÀ«zÉÃiÀÄÀÄÀªÀÄÀC¤ÀÄÀªÉÃ¯É¥ÀjºÁ®£Á ¸ÀÄwAiÀªÀgÀÀUÀÄ gÁdzÀ C¢üAiÀªÀÄÀªÀÄDzsÁzÉÊ±ÀÄÀ PÉÆzÀ¯ÀÄgÁdzÀ±Á¸ÀÄÀ ÀªÉÃgÉÉgÁd¸ÀÄðgÀÄ ºÉgÀ¹zÀ¸Á¤ÃÀ£À±Á¸ÀgÁzÀ¤AiÀªÀÄÀªÀÄ gÁeÁAUÀ¯ÀªÉÃgÉÉgÁd¥Á®gÀªÁrzÀ ¤AiÀªÀÄÀªÁUÀ PÀ£ÁðlPÀGZÀ£ÁAiÀÄ®AiÀªÀªÁrzÀ¤AiÀªÀÄÀªÀ

P£ÁðlPÀ¸ÁðgÀ

¸ASÉ: UÁC¥ 331 UÁ¥AC 2019

P£ÁðlP ¸PÁðgz ¸aªÁ®AiÀ,
§ºÀªÀºr Plq
¨AU¼ÆgÀ, ¢£ÁAP:27-07-2020.

C¢üÀZÀÉ

P£ÁðlP UÁªÀ ¸gÁeï ªÀvÀ ¥AZÁAiÀvï gÁeï C¢¤AiÀªÀ, 1993 (1993g P£ÁðlP C¢¤AiÀªÀ ¸ASÉ 14)g ¥Pgt 243 ªÀvÀ 244 gÆq£ N¢PÆAqAv ¥Pgt 311 g ªÀÆ®P ¥zvªÁz C¢PÁgU¼£Ä Z¯Á¬Ä¹, P£ÁðlP UÁªÀ ¸gÁeï ªÀvÀ ¥AZÁAiÀvï gÁeï (UÁªÀ ¥AZÁAiÀwU¼ DAiÀªÀAiÀ ªÀvÀ ¯P¥vU¼Å) (wzÀ¥r) ¤AiÀªÀU¼Ä, 2020 g Pgq£Ä ¢£ÁAP:12-03-2020 g P£ÁðlP gÁd¸ ¥vz ¨ÁU-IV-A g° ¥Pn¹, CzjAz ¨Á¢vgÁUÀª ªÉQU½Az ¸zj PgrU DPÃ¥u ªÀvÀ ¸®ºU¼£Ä P£ÁðlP gÁd¸ ¥vz° ¥PlªÁz ¢£ÁAP¢Az ªÀÆªvÀ ¢£U¼Æ¼UÁV ¸°¸¨ÃPAzÀ PÆÃjgÀªÉzjAz;

ªÀvÀ ¸zj gÁd¸ ¥vªÉ ¸Áªðd¤PjU ¢£ÁAP:12-03-2020 gAzÀ ®¨¸ÁUÀªÁv ªÁrgÀªÉzjAz;

ªÀvÀ, ¸zj Pgr£ ¸A§Azz° gÁd¸ ¸PÁðgP¸ AiiÁªÉzÃ DPÃ¥u Cxªá ¸®ºU¼Ä ¨Ág¢gÀªÉzjAz;

FU P£ÁðlP UÁªÀ ¸gÁeï ªÀvÀ ¥AZÁAiÀvï gÁeï C¢¤AiÀªÀ, 1993 (1993g P£ÁðlP C¢¤AiÀªÀ ¸ASÉ 14)g 311 g° ¥zvªÁz C¢PÁgªÉ£Ä Z¯Á¬Ä¹ P£ÁðlP ¸PÁðgªÉ F ªÀÆ®P ¤AiÀªÀU¼£Ä ga¸Ävz, JAzg;-

¤AiÀÄªÀÅUÀÀÄ

1. ºÉÆgÀÄ ªÀÄvÀÄ ¥ÁæzsÀ¨sÁ (1) F ¤AiÀÄªÀÅU¼£Ä PÁðlP UÁªÀ ¸gÁeï ªÀÄvÀ ¥AZÁAiÀÄvï gÁeï (UÁªÀ ¥AZÁAiÀÄwU¼ DAiÀÄªÀiÁ ªÀÄvÀ ¯P¥vU¼Ä) (wzÀ¥r) ¤AiÀÄªÀÅU¼Ä, 2020 JAzÀ PgAiÀÄvPÀzÀ.

(2) EªÀ gÁdå¥vz° CAwªÀÄªÁV ¥Pn¹z ¢£ÁAP¢Az eÁjU §gvPÀzÀ.

2. ¥ÀæªÀÄÀUÀÄÀ¥ÀæzsÁ¤AiÀÄÉÃd£É PÁðlP ¥AZÁAiÀÄvï gÁeï (UÁªÀ ¥AZÁAiÀÄwU¼ DAiÀÄªÀiÁ ªÀÄvÀ ¯P¥vU¼Ä) ¤AiÀÄªÀÅU¼Ä, 2006(E° E£Ä ªÀÄAz ªÀÆ® ¤AiÀÄªÀÅU¼AzÀ G¯ÁTvªÁVz)g° "¥AZÁAiÀÄvï gÁeï" JA§ ¥zU¼Ä J¯° PAqÀ§gÀvªÇ C° "UÁªÀ ¸gÁeï ªÀÄvÀ ¥AZÁAiÀÄvï gÁeï" JA§ ¥zU¼Ä ¥vÁAiÆÃf¸vPÀzÀ.

3. **¤AiÀÄªÀ19gÀ¥Àæ¤AiÀÄÉÃd£É** ªÀÆ® ¤AiÀÄªÀÅU¼ ¤AiÀÄªÀ 19 P F ªÀÄAc£Av ¥vÁ¤AiÆÃf¸vPÀzÀ.

"**19. DzÁAiÀÄÀÄ£ÀÄ ¸ÀUÀæ** UÁªÀ ¥AZÁAiÀwAiÀ DzÁAiÀU¼£Ä C¢Pv ªÀQU½Az ¸A§Az¥l ªÀQ Cxªà ¸A¸U½Az £UzÀ, ZPï, r.r. Prmï PÁqïð, q©qï PÁqïð, £mï ¨ÁAQAUï, AiÀÄÄ.¦.L, ªÆ¨É¯ï ªÁ¯mï ªÀÆ®P ¹ÃPj¸§ºÀzÀ ºÁUÆ F jÃw ¹ÃPj¹ ¸AU»¹z ª¸Æ¯ÁwU½U UÁªÀ ¥AZÁAiÀwAiÀÄ vAvÁA±z ªÀÆ®P ¹ÃPj¸®qÀª ªÀÄ¢v g¹ÃwAiÀ£Ä £ªÀÆ£-3 g° ¥AZÁAiÀvï C©ª¢ C¢PÁj Cxªà PÁAiÀðz²ð Cxªà ¢wÃAiÀ zeð ¯P ¸ºÁAiÀP Cxªà C¢Pv Pg ª¸Æ°UÁgjAz ¤ÃqÀªÀzÀ."

4. 20£Ã¤AiÀÄªÀzÀvzÀ¥ÀÆ- ªÀÆ® ¤AiÀÄªÀÅU¼, ¤AiÀÄªÀ 20 g°,-

1) "vÁvÁ°P j¹Ãw" ¥zU¼Ä ©lÄ©qvPÀzÀ; ªÀvÀ

2) "C¢Pv j¹Ã¢" JA§ ¥zU½U "UtQÃPv g¹Ã¢" JA§ ¥zU¼Ä ¥wAiÆÃf¸vPÀzÀ.

5. **21£Ã¤AiÀÄªÀ¤ÀvzÀ©lÄ ©qÀ¤ÀzÀ-** ªÀÆ® ¤AiÀÄªÀÅU¼, ¤AiÀÄªÀ 21 C£Ä ©lÄ©qvPÀzÀ.

6. **£ÀÆ£Ã3 gÀvzÀ¥ÀÆ-** ªÀÆ® ¤AiÀÄªÀÅU¼, £ªÀÆ£-3 g°,-

1) "²Pt Pg (10%)" JA§ ¥zU¼Ä, Dªgt ªÀvÀ CAQU¼Ä ©lÄ©qvPÀzÀ; ªÀvÀ

2) "5. eÁ»ÃgÁvÀ vjU" JA§ ¥zU¼Ä ªÀvÀ CAQAiÀ£Ä ©lÄ©qvPÀzÀ.

7. £ÀÆ£Ã3 C£Ã©lÄ©qÀ¤ÀzÀ- ªÀÆ® ¤AiÀÄªÀÅU¼£ÀÆ£Ã3 C£Ã©lÄ©qÀ¤ÀzÀ

P£ÁðlP gÁdå¥Á®g DeÁ£Ä¸Ág ªÀvÀ
Cªg º¸j£°

(©.£ÀÃ£ï PÀ¤ÄgÀï)
¸PÁðgz C¢Ã£ PÁAiÀðz²ð,(f.¥A.)(¥)
UÁ«ÄÃuÁ©ª¢ ªÀvÀ ¥AZÁAiÀvï gÁeï E¯ÁS

PR-337

ಕರ್ನಾಟಕ ಸರ್ಕಾರ

ಸಂಖ್ಯೆ: ಗ್ರಾಅಪ 507 ಗ್ರಾಪಂಅ 2019

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ
ಬೆಂಗಳೂರು, ದಿನಾಂಕ:09-09-2020.

ಅಧಿಸೂಚನೆ

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 (1993ರ ಕರ್ನಾಟಕ ಅಧಿನಿಯಮ ಸಂಖ್ಯೆ 14) ರ ಪ್ರಕರಣ 58-ಇ, 61-ಎ, 75, 76, 77, 78, ಮತ್ತು 79ನೇ ಪ್ರಕರಣಗಳೊಂದಿಗೆ ಓದಿಕೊಂಡಂತೆ ಪ್ರಕರಣ 311ರ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಈ ಕೆಳಕಂಡಂತೆ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ಗ್ರಾಮ ನೀರು ಸರಬರಾಜು ಮತ್ತು ನೈರ್ಮಲ್ಯ ಸಮಿತಿ) ನಿಯಮಗಳು, 2020ರ ಕರಡನ್ನು ಸದರಿ ಅಧಿನಿಯಮದ ಪ್ರಕರಣ 311 ಉಪಪ್ರಕರಣ (1) ರಲ್ಲಿ ನಿಗದಿಪಡಿಸಿದಂತೆ, ಇದರಿಂದ ಬಾಧಿತರಾಗುವ ಎಲ್ಲಾ ವ್ಯಕ್ತಿಗಳ ಮಾಹಿತಿಗಾಗಿ ಈ ಮೂಲಕ ಪ್ರಕಟಿಸಲಾಗಿದೆ ಮತ್ತು ಸದರಿ ಕರಡನ್ನು ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಿತವಾದ ದಿನಾಂಕದಿಂದ ಮೂವತ್ತು ದಿನಗಳ ನಂತರ ಪರಿಗಣನೆಗೆ ತೆಗೆದುಕೊಳ್ಳಲಾಗುವುದೆಂದು ಈ ಮೂಲಕ ಸೂಚಿಸಲಾಗಿದೆ.

ಮೇಲೆ ನಿರ್ದಿಷ್ಟಪಡಿಸಿದ ಅವಧಿಯು ಮುಕ್ತಾಯವಾಗುವ ಮೊದಲು ಸದರಿ ಕರಡು ನಿಯಮಗಳಿಗೆ ಸಂಬಂಧಿಸಿದಂತೆ ಯಾವೊಬ್ಬ ವ್ಯಕ್ತಿಯಿಂದ ರಾಜ್ಯ ಸರ್ಕಾರವು ಸ್ವೀಕರಿಸಬಹುದಾದ ಯಾವುದೇ ಆಕ್ಷೇಪಣೆ ಮತ್ತು ಸಲಹೆಗಳನ್ನು ರಾಜ್ಯ ಸರ್ಕಾರವು ಪರಿಗಣಿಸುವುದು. ಆಕ್ಷೇಪಣೆ ಅಥವಾ ಸಲಹೆಗಳನ್ನು ಸರ್ಕಾರದ ಪ್ರಧಾನ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, 3ನೇಹಂತ, 3ನೇ ಮಹಡಿ, ಬಹುಮಹಡಿಗಳ ಕಟ್ಟಡ, ಡಾ.ಅಂಬೇಡ್ಕರ್ ವೀಧಿ, ಬೆಂಗಳೂರು-01 ಇವರಿಗೆ ಕಳುಹಿಸಲು ಕೋರಲಾಗಿದೆ.

ಕರಡು ನಿಯಮಗಳು

1. ಹೆಸರು ಮತ್ತು ಪ್ರಾರಂಭ.-(1) ಈ ನಿಯಮಗಳನ್ನು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ಗ್ರಾಮ ನೀರು ಸರಬರಾಜು ಮತ್ತು ನೈರ್ಮಲ್ಯ ಸಮಿತಿ) ನಿಯಮಗಳು, 2020 ಎಂದು ಕರೆಯತಕ್ಕದ್ದು.

(2) ಇವು ರಾಜ್ಯಪತ್ರದಲ್ಲಿ ಅಂತಿಮವಾಗಿ ಪ್ರಕಟಿಸಿದ ದಿನಾಂಕದಿಂದ ಜಾರಿಗೆ ಬರುತ್ತದೆ.

2. ಪರಿಭಾಷೆಗಳು.- ಈ ನಿಯಮಗಳಲ್ಲಿ ವಿಷಯಕ್ಕೆ ಅಥವಾ ಸಂದರ್ಭಕ್ಕೆ ಬೇರೆ ಅರ್ಥದ ಅಗತ್ಯ ಇರದಿದ್ದರೆ,-

(ಎ) "ಅಧಿನಿಯಮ" ಎಂದರೆ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 (1993 ರ ಕರ್ನಾಟಕ ಅಧಿನಿಯಮ ಸಂಖ್ಯೆ:14);

(©) "ಅಧ್ಯಕ್ಷರು" ಎಂದರೆ ಸಂಬಂಧಪಟ್ಟ ಗ್ರಾಮದ ಗ್ರಾಮ ಪಂಚಾಯತಿಯ ಸದಸ್ಯರುಗಳಿಂದ ಗ್ರಾಮ ಸಭೆಯ ಮುಖಾಂತರ ಆಯ್ಕೆಯಾದ ಗ್ರಾಮ ಪಂಚಾಯತಿಯ ಒಬ್ಬ ಸದಸ್ಯನು;

(ಸಿ) "ಉಪಾಧ್ಯಕ್ಷರು" ಎಂದರೆ ಸಂಬಂಧಪಟ್ಟ ಗ್ರಾಮದ ಗ್ರಾಮ ಪಂಚಾಯತಿಯ ಸದಸ್ಯರುಗಳಿಂದ ಗ್ರಾಮ ಸಭೆಯ ಮುಖಾಂತರ ಆಯ್ಕೆಯಾದ ಗ್ರಾಮ ಪಂಚಾಯತಿಯ ಒಬ್ಬ ಸದಸ್ಯನು ಅಥವಾ ಗ್ರಾಮ ಸಭೆಯ ಮುಖಾಂತರ ನಾಮನಿರ್ದೇಶನ ಮಾಡಿದ ಸದಸ್ಯನು;

(r) "ಸಮಿತಿ" ಎಂದರೆ ನಿಯಮ 4 ರಡಿಯಲ್ಲಿ ರಚಿಸಲ್ಪಟ್ಟಿರುವ ಗ್ರಾಮ ನೀರು ಸರಬರಾಜು ಮತ್ತು ನೈರ್ಮಲ್ಯ ಸಮಿತಿ; ಮತ್ತು

(ಇ) "ಸದಸ್ಯ ಕಾರ್ಯದರ್ಶಿ" ಎಂದರೆ ಪಂಚಾಯತಿ ಅಭಿವೃದ್ಧಿ ಅಧಿಕಾರಿ / ಗ್ರಾಮ ಪಂಚಾಯತಿಯ ಕಾರ್ಯದರ್ಶಿ ಗ್ರೇಡ್-1.

3. ಸಮಿತಿಯ ಕಾರ್ಯವ್ಯಾಪ್ತಿ.- ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿನ ಸಂಬಂಧಪಟ್ಟ ಪ್ರತಿಯೊಂದು ಗ್ರಾಮ ಹಾಗೂ ಗ್ರಾಮಕ್ಕೆ ಹೊಂದಿಕೊಂಡಿರುವ ಉಪ-ಗ್ರಾಮಗಳು, ಜನವಸತಿ ಪ್ರದೇಶಗಳನ್ನು ಒಳಗೊಂಡಿರುತ್ತದೆ.

4. ಸಮಿತಿಯ ರಚನೆ.- (ಎ) ಸಂಬಂಧಪಟ್ಟ ಗ್ರಾಮದ ಎಲ್ಲಾ ಗ್ರಾಮ ಪಂಚಾಯಿತಿಯ ಸದಸ್ಯರು, ಸಮಿತಿ ಕಾರ್ಯದರ್ಶಿ, ನಾಮನಿರ್ದೇಶಿತ ಸದಸ್ಯರು ಎಲ್ಲರನ್ನು ಒಳಗೊಂಡು ಗರಿಷ್ಠ 10 ಸದಸ್ಯರನ್ನೊಳಗೊಂಡ ಗ್ರಾಮ ನೀರು ಸರಬರಾಜು ಮತ್ತು ನೈರ್ಮಲ್ಯ ಸಮಿತಿಯಾಗಿರಬೇಕು;

(ಬಿ) ಗ್ರಾಮ ಸಭೆಯಲ್ಲಿ ಸ್ಥಳೀಯ ಔಪಚಾರಿಕ / ಅನೌಪಚಾರಿಕ ಸಂಘ ಸಂಸ್ಥೆಗಳ ಅಂದರೆ ರೈತ ಸಂಘಗಳು, ಮಹಿಳಾ ಸ್ವ-ಸಹಾಯ ಸಂಘಗಳ ಪ್ರತಿನಿಧಿಗಳು ಮತ್ತು ಸರ್ಕಾರದಿಂದ ಮಾನ್ಯತೆ ಪಡೆದ ಇದೇ ತೆರನಾದ ಸಂಘಟನೆಗಳಿಗೆ ಸೇರಿದ ಸದಸ್ಯರುಗಳನ್ನು ಗ್ರಾಮ ಸಭೆಯ ಮುಖಾಂತರ ನಾಮನಿರ್ದೇಶನ ಮಾಡುವುದು;

(ಸಿ) ಗ್ರಾಮ ನೀರು ಸರಬರಾಜು ಮತ್ತು ನೈರ್ಮಲ್ಯ ಸಮಿತಿಯ ಒಟ್ಟಾರೆ ಸದಸ್ಯರ ಸಂಖ್ಯೆಯಲ್ಲಿ ಶೇಕಡ 50 ರಷ್ಟು ಮಹಿಳಾ ಸದಸ್ಯರುಗಳಿರಬೇಕು;

(ಡಿ) ಗ್ರಾಮ ನೀರು ಸರಬರಾಜು ಮತ್ತು ನೈರ್ಮಲ್ಯ ಸಮಿತಿಯ ಒಟ್ಟಾರೆ ಸದಸ್ಯರ ಸಂಖ್ಯೆಯಲ್ಲಿ ಶೇಕಡ 20 ರಷ್ಟು ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಸದಸ್ಯರುಗಳಿರಬೇಕು;

(ಇ) ಅಧ್ಯಕ್ಷರನ್ನು ಗ್ರಾಮ ಪಂಚಾಯಿತಿಯ ಸದಸ್ಯರುಗಳು ಗ್ರಾಮ ಸಭೆಯ ಮುಖಾಂತರ ಆ ಗ್ರಾಮದ ಗ್ರಾಮ ಪಂಚಾಯತಿಯ ಒಬ್ಬ ಸದಸ್ಯರನ್ನು ಆಯ್ಕೆಮಾಡುವುದು;

(ಎಫ್) ಉಪಾಧ್ಯಕ್ಷರನ್ನು ಗ್ರಾಮ ಸಭೆಯ ಮುಖಾಂತರ ಆ ಗ್ರಾಮದ ಗ್ರಾಮ ಪಂಚಾಯತಿಯ ಒಬ್ಬ ಸದಸ್ಯನು ಅಥವಾ ಗ್ರಾಮ ಸಭೆಯ ಮುಖಾಂತರ ನಾಮನಿರ್ದೇಶನ ಮಾಡಿದ ಸದಸ್ಯನು;

(ಜಿ) ಗ್ರಾಂ ಪಂಚಾಯತಿಯ ಪಂಚಾಯತಿ ಅಭಿವೃದ್ಧಿ ಅಧಿಕಾರಿ ಅಥವಾ ಗ್ರಾಮ ಪಂಚಾಯತಿಯ ಕಾರ್ಯದರ್ಶಿ ಗ್ರೇಡ್-1 ರವರು ಸಮಿತಿಯ ಸದಸ್ಯ ಕಾರ್ಯದರ್ಶಿಯಾಗಿರಬೇಕು; ಮತ್ತು

(ಹೆಚ್)ಸಮಿತಿಯ ಯಾವೊಬ್ಬ ಸದಸ್ಯರಿಗೂ ಗೌರವಧನ ಅಥವಾ ಇತರೆ ಸಂಭಾವನೆ ಇರುವುದಿಲ್ಲ.

5. ಸಮಿತಿಯ ಕಾಲಾವಧಿ.- (1) **ಈ ಸಮಿತಿಯಲ್ಲಿನ ಗ್ರಾಮ ಪಂಚಾಯತಿ ಸದಸ್ಯರುಗಳ ಅವಧಿ ಸಮಿತಿ ರಚನೆಯಾದ ದಿನಾಂಕದಿಂದ ಮೂವತ್ತು ತಿಂಗಳುಗಳ ಅವಧಿಯಾಗಿರತಕ್ಕದ್ದು. ಅಥವಾ ಗ್ರಾಮ ಪಂಚಾಯತಿಯು, ಯಾವುದಾದರೂ ಕಾರಣಗಳಿಂದ ಅದರ ಅವಧಿಯು ಮುಕ್ತಾಯವಾದಲ್ಲಿ ಇದರಲ್ಲಿ ಯಾವುದು ಮೊದಲೋ ಆ ಅವಧಿಯವರೆಗೆ ಕಾರ್ಯ ನಿರ್ವಹಿಸುವುದು.**

(2) ಸಮಿತಿಯ ನಾಮನಿರ್ದೇಶಿತ ಸದಸ್ಯರುಗಳ ಅವಧಿಯು ನಾಮನಿರ್ದೇಶನಗೊಂಡ ದಿನಾಂಕದಿಂದ **ಮೂವತ್ತು ತಿಂಗಳುಗಳ** ಅವಧಿಗೆ ಇರತಕ್ಕದ್ದು. ಗ್ರಾಮ ಪಂಚಾಯತಿಯ ಅವಧಿಯು ಮುಕ್ತಾಯವಾದರೂ ಮತ್ತೆ ಗ್ರಾಮ ಪಂಚಾಯತಿಯ ರಚನೆಯಾಗುವವರೆಗೂ, ಸಮಿತಿಯ ಇತರ ಸದಸ್ಯರುಗಳು ಸಮಿತಿಯ ಜವಾಬ್ದಾರಿಗಳನ್ನು ನಿರ್ವಹಿಸತಕ್ಕದ್ದು.

6. ಸಮಿತಿಯ ಉದ್ದೇಶಗಳು, ಜವಾಬ್ದಾರಿಗಳು ಮತ್ತು ಕಾರ್ಯವಿಧಾನಗಳು.-(1) ನೀರು ಸರಬರಾಜು ವ್ಯವಸ್ಥೆ, ಸಮಿತಿಯು ಈ ಕೆಳಕಂಡಂತೆ ಗ್ರಾಮದಲ್ಲಿ ನೀರು ಸರಬರಾಜನ್ನು ಮಾಡುವುದು,-

(i) ಸಾರ್ವಜನಿಕರಿಗೆ ಶುದ್ಧವಾದ ಮತ್ತು ಅಗತ್ಯ ಪ್ರಮಾಣದ ನೀರು ಸರಬರಾಜು ಮಾಡುವಲ್ಲಿ ಗ್ರಾಮ ಪಂಚಾಯತಿಗೆ ನೆರವಾಗುವುದು. ಕುಡಿಯುವ ನೀರಿಗಾಗಿ ನೀರಿನ ಮೂಲ, ಹರಿಯುವ ನದಿ, ಹೊಳೆಗಳನ್ನು ಸ್ವಚ್ಛಗೊಳಿಸುವ ಮತ್ತು ಸುಸ್ಥಿತಿಯಲ್ಲಿ ಇಡುವಲ್ಲಿ ಅಗತ್ಯ ಸಹಕಾರ ನೀಡಬೇಕು . ಗ್ರಾಮದ ವ್ಯಾಪ್ತಿಯಲ್ಲಿರುವ ಕೆರೆ, ಬಾವಿ, ತೊರೆ ಹಾಗೂ ಇತರೆ ಜಲಮಾರ್ಗಗಳನ್ನು ಆಗಿಂದಾಗೆಯೇ ದುರಸ್ಥಿಗೊಳಿಸಲು ಹಾಗೂ ನೀರನ್ನು ಪಡೆಯಲು ಗ್ರಾಮ ಪಂಚಾಯತಿಗೆ ನೆರವಾಗುವುದು. ಕುಡಿಯುವ ನೀರಿನ ಸ್ಥಾವರಗಳ ಮುಂದೆ ಹಾಗೂ ಕುಡಿಯುವ ನೀರಿನ ಮೂಲ ಸ್ಥಾನದಲ್ಲಿ ಸ್ನಾನ ಮಾಡುವುದನ್ನು, ಬಟ್ಟೆ ಒಗೆಯುವುದನ್ನು, ಪ್ರಾಣಿಗಳನ್ನು ತೊಳೆಯುವುದನ್ನು ಅಥವಾ ಇತರೆ ಯಾವುದೇ ಕಾರಣದಿಂದ ನೀರನ್ನು ಕಲುಷಿತಗೊಳಿಸುವುದನ್ನು ತಡೆಗಟ್ಟುವುದು; ಮತ್ತು

(ii) ಕುಡಿಯುವ ನೀರಿಗೆ ಸಂಬಂಧಿಸಿದ ಕಾಮಗಾರಿಗಳ ನಿರ್ವಹಣೆ, ಯಂತ್ರೋಪಕರಣಗಳನ್ನು ಸಂರಕ್ಷಣೆ ಮಾಡುವಲ್ಲಿ ಗ್ರಾಮ ಪಂಚಾಯತಿಗೆ ಸಹಕಾರ ನೀಡುವುದು. ನೀರನ್ನು ಸರಬರಾಜು ಮಾಡುವುದಕ್ಕೆ ಯಾವುದೇ ವ್ಯಕ್ತಿ ಅಥವಾ ಸಂಸ್ಥೆಗಳೊಡನೆ ಗ್ರಾಮ ಪಂಚಾಯತಿಯು ಕರಾರು ಮಾಡಿಕೊಂಡಿದ್ದಲ್ಲಿ ಸದರಿ ಸಂಸ್ಥೆ/ವ್ಯಕ್ತಿಗೆ ಅಗತ್ಯ ಸಹಕಾರ ನೀಡುವುದು.

(iii) ಕುಡಿಯುವ ನೀರಿನ ಅಭಾವದ ಪರಿಸ್ಥಿತಿಯಲ್ಲಿ ಖಾಸಗಿ ವ್ಯಕ್ತಿಗಳಿಗೆ ಸಂಬಂಧಿಸಿದ ಬಾವಿಗಳು, ಕೊಳವೆ ಬಾವಿಗಳು ಮತ್ತು ಇತರೆ ಜಲ ಮೂಲಗಳಿಂದ ಗ್ರಾಮಕ್ಕೆ ನೀರು ಒದಗಿಸಬೇಕಾದ ಸಂದರ್ಭದಲ್ಲಿ ಖಾಸಗಿ ಬೋರ್‌ವೆಲ್ ಮಾಲೀಕರ ಮನವೊಲಿಸುವಲ್ಲಿ ಮತ್ತು ಕರಾರು ಪ್ರಕ್ರಿಯೆಯಲ್ಲಿ ಗ್ರಾಮ ಪಂಚಾಯತಿಗೆ ಅಗತ್ಯ ಸಹಕಾರ ನೀಡುವುದು.

(2) ಸ್ವಚ್ಛತೆ, ನೈರ್ಮಲ್ಯೀಕರಣ ಮತ್ತು ಚರಂಡಿ ವ್ಯವಸ್ಥೆಯ ಬಗ್ಗೆ,- ಗ್ರಾಮದಲ್ಲಿ ಸ್ವಚ್ಛತೆ ನೈರ್ಮಲ್ಯೀಕರಣಕ್ಕಾಗಿ ಗ್ರಾಮ ಪಂಚಾಯತಿಗೆ ಈ ಸಮಿತಿಯು ಕೆಳಕಂಡ ಅಂಶಗಳನ್ನು ಕಾರ್ಯಗತಗೊಳಿಸಲು ನೆರವಾಗುವುದು,-

(i) ಗ್ರಾಮದ ಯಾವುದೇ ಕಟ್ಟಡ ಅಥವಾ ಗುಡಿಸಲಿನ ಮಾಲೀಕನು ಅಥವಾ ಅಂಗಡಿ ಮಾಲೀಕನು ಶೌಚ ಗೃಹಗಳನ್ನು ಸ್ವಚ್ಛವಾಗಿ ನಿರ್ವಹಿಸದಿದ್ದರೆ ಅಂಥವರಿಗೆ ಸ್ವಚ್ಛತೆಯ ಕುರಿತು ಅರಿವು ಮೂಡಿಸಲು ಯತ್ನಿಸುವುದು. ಸದರಿ ಅನೈರ್ಮಲ್ಯ ಪ್ರವೃತ್ತಿ ಮುಂದುವರೆದ ಸಂದರ್ಭದಲ್ಲಿ ಮುಂದಿನ ಅಗತ್ಯ ಕ್ರಮಕ್ಕಾಗಿ ಗ್ರಾಮ ಪಂಚಾಯತಿಯ ಗಮನಕ್ಕೆ ತರುವುದು. ನಿಗದಿತ ಸಮಯದೊಳಗೆ ಸ್ವಚ್ಛತೆಯನ್ನು ಮೂಡಿಸುವಂತೆ ಅಗತ್ಯಪಡಿಸಬಹುದು ಹಾಗೂ ನಿಗದಿತ ಸಮಯದಲ್ಲಿ ಸಂಬಂಧಪಟ್ಟವರು ಸ್ವಚ್ಛ ಮಾಡದಿದ್ದರೆ ಗ್ರಾಮ ಪಂಚಾಯತಿಯ ವತಿಯಿಂದ ಆ ಪ್ರದೇಶವನ್ನು ಸ್ವಚ್ಛಗೊಳಿಸಿ, ಅದಕ್ಕೆ ಭರಿಸುವ ವೆಚ್ಚವನ್ನು ಸಂಬಂಧಪಟ್ಟ ಪ್ರದೇಶದ ಮಾಲೀಕರಿಂದ ತೆರಿಗೆ ಬಾಕಿ ರೂಪದಲ್ಲಿ ವಸೂಲಿ ಮಾಡಲು ನೆರವಾಗುವುದು;

(ii) ಆರೋಗ್ಯಕ್ಕೆ ಹಾನಿಕರವಾದ ಅಥವಾ ನೆರಹೊರೆಯವರಿಗೆ ಅಸಹ್ಯಕರವಾಗಿರುವ ಅಥವಾ ಉಪದ್ರವವಾಗುವಂತ ಚಟುವಟಿಕೆಗಳನ್ನು ನಡೆಸುವ ಅಥವಾ ನಿವೇಶನಗಳನ್ನು ಹೊಲಸು ಸಂಗ್ರಹಣೆಗಾಗಿ ಉಪಯೋಗಿಸುವ ಅಥವಾ ನಿವೇಶನವನ್ನು ನಿರಂತರವಾಗಿ ನೀರು ನಿಲ್ಲಲು ಅವಕಾಶ ಮಾಡಿಕೊಟ್ಟಿರುವಂಥಹ ಸ್ಥಳದ ಮಾಲೀಕರಿಗೆ ಸೂಕ್ತ ತಿಳುವಳಿಕೆ ನೀಡಿ ಅಂತಹ ಖಾಲಿ ನಿವೇಶನಗಳನ್ನು ಸ್ವಚ್ಛಗೊಳಿಸುವಂತೆ ಅರಿವು ಮೂಡಿಸುವುದು;

(iii) ಖಾಲಿ ನಿವೇಶನದಲ್ಲಿ ಸಾರ್ವಜನಿಕರಿಗೆ ತೊಂದರೆಯುಂಟು ಮಾಡುವ ಕುರುಚಲು ಗಿಡಗಳು, ಪಾಪುಸುಕಳ್ಳಿಗಳು ಇನ್ನಿತರೆ ಅಸಯ್ಯಕರವಾದ ಮತ್ತು ಅಪಾಯಕಾರಿಯಾಗಿ ಬೆಳೆದಿರುವ ಕಳೆಗಳನ್ನು ತೆಗೆದು ಹಾಕುವಂತೆ ಸಂಬಂಧಪಟ್ಟ ನಿವೇಶನದ ಮಾಲಿಕರಿಗೆ ತಿಳುವಳಿಕೆ ನೀಡುವುದು;

(iv) ಸಮಿತಿಯು ನೀಡುವ ಸೂಚನೆಯನ್ನು ನಿರಾಕರಿಸಿದರೆ ಅಂತಹ ಪ್ರದೇಶವನ್ನು ಗ್ರಾಮ ಪಂಚಾಯತಿಯಿಂದ ಸ್ವಚ್ಛಗೊಳಿಸುವುದು ಹಾಗೂ ಆ ನಿವೇಶನದ ಅನುಭವದಾರರಿಂದ ಸ್ವಚ್ಛತೆಕ್ಕೆ ವೆಚ್ಚವಾದ ಮೊತ್ತವನ್ನು ತೆರಿಗೆ ಬಾಕಿ ರೂಪದಲ್ಲಿ ವಸೂಲಿ ಮಾಡುವಲ್ಲಿ ಗ್ರಾಮ ಪಂಚಾಯತಿಗೆ ನೆರವಾಗುವುದು;

(v) ಗ್ರಾಮ ಪಂಚಾಯತಿ ವ್ಯಾಪ್ತಿಯ ದೇವಸ್ಥಾನ, ಚರ್ಚ್, ಮಸೀದಿ ಮುಂತಾದ ಆರಾಧನೆಯ ಸ್ಥಳದಲ್ಲಿ ಜಾತ್ರೆಗಳನ್ನು, ಉತ್ಸವಗಳನ್ನು ನಡೆಸಿದಾಗ ಆ ಪ್ರದೇಶದ ಸ್ವಚ್ಛತೆ ನಿರ್ವಹಣೆಗಾಗಿ ಸಂಬಂಧಪಟ್ಟ ಧಾರ್ಮಿಕ ಟ್ರಸ್ಟ್‌ಗಳು ಮುಂಗಡ ಹಣವನ್ನು ಗ್ರಾಮ ಪಂಚಾಯತಿಗೆ ಪಾವತಿಸುವಂತೆ ನೋಡಿಕೊಳ್ಳುವುದು;

(vi) ಈ ವಿಷಯಕ್ಕೆ ಸಂಬಂಧಿಸಿದಂತೆ ಅವಶ್ಯವಿದ್ದಲ್ಲಿ ಸಂಬಂಧಪಟ್ಟ ತಹಶೀಲ್ದಾರ್ ಅಥವಾ ಜಿಲ್ಲಾಧಿಕಾರಿಯವರ ಮಧ್ಯಸ್ಥಿಕೆಯ ಮೂಲಕ ವಂತಿಗೆಯನ್ನು ಪಡೆದುಕೊಳ್ಳುವಂತೆ ಗ್ರಾಮ ಪಂಚಾಯತಿಗೆ ಸಲಹೆ ನೀಡುವುದು;

(vii) ಗ್ರಾಮಗಳಲ್ಲಿ ನೀರು, ಕೊಳಚೆ ನೀರು ಸರಾಗವಾಗಿ ಹರಿದು ಹೋಗಲು ಅನುವಾಗುವಂತೆ ಪಂಚಾಯತಿ ಪ್ರದೇಶದಲ್ಲಿ ಅಥವಾ ಖಾಸಗಿ ವ್ಯಕ್ತಿಯ ಭೂಮಿಯಲ್ಲಿ ಮಾಲೀಕರ ಸಹಮತಿಯೊಡನೆ ಅಥವಾ ಅವರೊಡನೆ ಕರಾರು ಮಾಡಿಕೊಳ್ಳುವ ಮೂಲಕ ಚರಂಡಿ ವ್ಯವಸ್ಥೆಯನ್ನು ರೂಪಿಸುವಲ್ಲಿ ಗ್ರಾಮ ಪಂಚಾಯತಿಗೆ ಅನುವು ನೀಡುವುದು. ಗ್ರಾಮದಲ್ಲಿನ ಯಾವುದೇ ವ್ಯಕ್ತಿ ಅವರುಗಳ ಮನೆಯ ಮುಂದೆ ಇರುವ ಚರಂಡಿಯಲ್ಲಿ ಅಡ್ಡಿಯುಂಟು

ಮಾಡಿದ್ದರೆ ಅಂಥಹ ವ್ಯಕ್ತಿಗೆ ಸ್ವಚ್ಛತೆಯ ಕುರಿತು ಅರಿವು ಮೂಡಿಸಲು ಯತ್ನಿಸುವುದು. ಸದರಿ ಅನೈರ್ಮಲ್ಯ ಪ್ರವೃತ್ತಿ ಮುಂದುವರೆದ ಸಂದರ್ಭದಲ್ಲಿ ಮುಂದಿನ ಅಗತ್ಯ ಕ್ರಮಕ್ಕಾಗಿ ಗ್ರಾಮ ಪಂಚಾಯತಿಯ ಗಮನಕ್ಕೆ ತರುವುದು;

(viii) ಜನ ವಸತಿ ಪ್ರದೇಶದಲ್ಲಿ ಮತ್ತು ಮುಖ್ಯ ರಸ್ತೆಗಳಲ್ಲಿ ಸ್ಥಾಪಿತವಾಗಿರುವ ಅಂಗಡಿಗಳು, ಹೋಟೆಲ್‌ಗಳು ಮತ್ತಿತರೆ ತಿಂಡಿ ತಿನಿಸಿನ ಅಂಗಡಿಗಳಲ್ಲಿ ಉಂಟಾಗುವ ತ್ಯಾಜ್ಯವನ್ನು ವೈಜ್ಞಾನಿಕವಾಗಿ ವಿಂಗಡಣೆ, ಸಂಗ್ರಹಣೆ, ಸಾಗಾಣಿಕೆ ಮತ್ತು ಸೂಕ್ತ ಸಂಸ್ಕರಣೆ ವ್ಯವಸ್ಥೆಯನ್ನು ರೂಪಿಸುವಲ್ಲಿ ಗ್ರಾಮ ಪಂಚಾಯತಿಗೆ ಅಗತ್ಯ ಸಹಕಾರ ನೀಡುವುದು;

(ix) ಜನ ವಸತಿ ಪ್ರದೇಶದಲ್ಲಿ ಮತ್ತು ಮುಖ್ಯ ರಸ್ತೆಗಳಲ್ಲಿ ಸ್ಥಾಪಿತವಾಗಿರುವ ಕೋಳಿ, ಮೀನು ಅಥವಾ ಇತರೆ ಮಾಂಸದ ಅಂಗಡಿಗಳಲ್ಲಿ ಉಂಟಾಗುವ ತ್ಯಾಜ್ಯವನ್ನು ವೈಜ್ಞಾನಿಕವಾಗಿ ಸಂಗ್ರಹಿಸಿ, ಸಾಗಾಣಿಕೆ ಮತ್ತು ಸೂಕ್ತ ಸಂಸ್ಕರಣೆ ವ್ಯವಸ್ಥೆಯನ್ನು ರೂಪಿಸುವಲ್ಲಿ ಗ್ರಾಮ ಪಂಚಾಯತಿಗೆ ಅನುವು ಮಾಡಿ ಕೊಡುವುದು;

(x) ಕುಡಿಯುವ ನೀರು ಮತ್ತು ನೈರ್ಮಲ್ಯಕ್ಕೆ ಸಂಬಂಧಿಸಿದ ಎಲ್ಲಾ ಬಳಕೆದಾರರ ಶುಲ್ಕವನ್ನು "ಕರ್ನಾಟಕ ರಾಜ್ಯ ನೈರ್ಮಲ್ಯ ಮತ್ತು ತ್ಯಾಜ್ಯ ನಿರ್ವಹಣಾ ನೀತಿ, ಕಾರ್ಯತಂತ್ರ ಹಾಗೂ ಉಪವಿಧಿಗಳು" ಅನ್ವಯ ನಿಗದಿಪಡಿಸಿ ವಸೂಲಾತಿ ಮಾಡುವಲ್ಲಿ ಗ್ರಾಮ ಪಂಚಾಯತಿಗೆ ಅಗತ್ಯ ಸಹಕಾರ ನೀಡಬೇಕು;

(xi) ಗ್ರಾಮದ ವ್ಯಾಪ್ತಿಯ ಮುಖ್ಯ ರಸ್ತೆಗಳಲ್ಲಿ ಅಪಘಾತದಿಂದ ಮೃತಪಡುವ ಯಾವುದೇ ಪ್ರಾಣಿಯ ದೇಹವನ್ನು ಹತ್ತಿರದಲ್ಲಿರುವ ಸರ್ಕಾರಿ ಅಥವಾ ಖಾಸಗಿ ಜಮೀನಿನಲ್ಲಿ ಹೂಳುವುದಕ್ಕೆ ವ್ಯವಸ್ಥೆ ಕಲ್ಪಿಸಲು ಅನುವು ಮಾಡಬೇಕು. ಇದರಿಂದಾಗಿ ರಸ್ತೆಯಲ್ಲಿ ದುರ್ವಾಸನೆಯಾಗುವುದನ್ನು ಮತ್ತು ಸಾಂಕ್ರಾಮಿಕ ಕಾಯಿಲೆ ಹರಡುವುದನ್ನು ನಿಯಂತ್ರಿಸಬಹುದಾಗಿರುತ್ತದೆ;

(xii) ಗ್ರಾಮದ ನೀರು ಸರಬರಾಜು ಮತ್ತು ನೈರ್ಮಲ್ಯಕ್ಕೆ ಸಂಬಂಧಿಸಿದ ಎಲ್ಲಾ ಕಾರ್ಯಚಟುವಟಿಕೆಗಳ ಜವಾಬ್ದಾರಿಯನ್ನು ನಿರ್ವಹಿಸಲು ಗ್ರಾಮ ಪಂಚಾಯಿತಿಗೆ ಈ ಸಮಿತಿಯು ನೆರವಾಗತಕ್ಕದ್ದು;

(xiii) ಗ್ರಾಮೀಣ ಜನತೆಯಲ್ಲಿ ನೀರು ಸರಬರಾಜು ಮತ್ತು ನೈರ್ಮಲ್ಯ ಬಗ್ಗೆ ತಿಳುವಳಿಕೆ, ಅರಿವು ಮೂಡಿಸುವುದು ಹಾಗೂ ಯೋಜನೆಯ ನೀತಿ-ನಿಯಮಗಳೊಂದಿಗೆ ವಿಶೇಷವಾಗಿ ಆರೋಗ್ಯ ಮತ್ತು ಶುಚಿತ್ವ ಕುರಿತು ಅರಿವು ಮೂಡಿಸುವುದು;

(xiv) ಪ್ಲಾಸ್ಟಿಕ್ ಬಳಕೆಯ ದುಷ್ಪರಿಣಾಮದ ಬಗ್ಗೆ ಸಮುದಾಯದಲ್ಲಿ ಜಾಗೃತಿ ಮೂಡಿಸುವುದು ಮತ್ತು ಪ್ಲಾಸ್ಟಿಕ್ ನಿಷೇಧಕ್ಕೆ ಕ್ರಮ ವಹಿಸುವಲ್ಲಿ ಸಹಕರಿಸುವುದು;

(xv) ಸಮುದಾಯವು ಕುಡಿಯುವ ನೀರನ್ನು ಪೋಲು(ವ್ಯರ್ಥ) ಮಾಡದಂತೆ ಜಾಗರೂಕತೆ ವಹಿಸಲು ಮತ್ತು ನೀರಿನ ಸದ್ಬಳಕೆಯ ಬಗ್ಗೆ ಅರಿವು ಮೂಡಿಸುವುದು;

(xvi) ಯೋಜನೆಯ ಪ್ರಯೋಜನ/ಲಾಭ ಹೊಂದುವ ಸಮುದಾಯವನ್ನು ವಿಶೇಷವಾಗಿ ನೀರು ಸರಬರಾಜು ಮತ್ತು ನೈರ್ಮಲ್ಯ ಯೋಜನೆಗಳ ಅನುದಾನ ಮೂಲವಾಗಿ ಸಮುದಾಯ ವಂತಿಗೆ ಸಂಗ್ರಹಣೆಗಾಗಿ (ಯಾವುದಾದರೂ ಇದ್ದರೆ) ಸಕ್ರೀಯವಾಗಿ ತೊಡಗಿಸಿಕೊಳ್ಳುವಂತೆ ಮನವೊಲಿಸುವುದು;

(xvii) ನೀರು ಸರಬರಾಜು ಮತ್ತು ಸ್ವಚ್ಛತೆಗೆ ಸಂಬಂಧಪಟ್ಟ ಯೋಜನೆ, ನಿರ್ಮಾಣ, ಕಾರ್ಯಾಚರಣೆ, ನಿರ್ವಹಣೆ ಮತ್ತು ಮೇಲ್ವಿಚಾರಣೆಯಲ್ಲಿ ಗಾಮ ಪಂಚಾಯತಿಗೆ ಅನುವು ಮಾಡುವುದು.

(xviii) ಎಲ್ಲಾ ಕುಟುಂಬಗಳು ಶೌಚಾಲಯಗಳನ್ನು ನಿರ್ಮಿಸಿ, ಕುಟುಂಬದ ಎಲ್ಲಾ ಸದಸ್ಯರು ಬಳಸಿಕೊಳ್ಳುವುದನ್ನು ಖಾತರಿಪಡಿಸಿಕೊಳ್ಳುವುದು. ಗ್ರಾಮದ ಪ್ರತಿ ಕುಟುಂಬವು ಶೌಚಾಲಯವನ್ನು ಬಳಸುತ್ತಿರುವ ಬಗ್ಗೆ ಖಾತರಿಪಡಿಸಿಕೊಳ್ಳುವುದು ಮತ್ತು ಶೌಚಾಲಯದ ನಿರ್ಮಾಣ ಹಾಗೂ ಬಳಕೆಗೆ ಪ್ರೇರೇಪಿಸುವುದು;

(xix) ಎಲ್ಲಾ ಕುಟುಂಬಗಳು ಮತ್ತು ವಾಣಿಜ್ಯ ಚಟುವಟಿಕೆಗಳಿಂದ ಉತ್ಪತ್ತಿಯಾಗುವ ತ್ಯಾಜ್ಯವನ್ನು ಹಸಿ ಮತ್ತು ಒಣ ಕಸವನ್ನು ವಿಂಗಡಿಸುವ ಮತ್ತು ಸಮರ್ಪಕವಾಗಿ ವಿಲೇ ಮಾಡುವ ಬಗ್ಗೆ ಅರಿವು ಮೂಡಿಸುವುದು. ಎಲ್ಲಾ ಮನೆಗಳಿಗೂ ಶುದ್ಧ ಕುಡಿಯುವ ನೀರು ಸರಬರಾಜು ವ್ಯವಸ್ಥೆ, ನೀರಿನ ಶುದ್ಧತೆಯ ಬಗ್ಗೆ ಸುರಕ್ಷಿತತೆಯ ಕ್ರಮ, ನೀರಿನ ಟ್ಯಾಂಕ್‌ಗಳನ್ನು ಶುಚಿಗೊಳಿಸುವಿಕೆ, ಶುದ್ಧ ಕುಡಿಯುವ ನೀರಿನ ಘಟಕಗಳ ದುರಸ್ಥಿಗೊಳಿಸುವಿಕೆ ಮತ್ತು ಸರಬರಾಜು ವ್ಯವಸ್ಥೆಯಲ್ಲಿ ನೀರು ಕಲುಷಿತವಾಗದಂತೆ ಮುಂಜಾಗ್ರತಾ ಕ್ರಮ ಕೈಗೊಳ್ಳಲು ಗ್ರಾಮ ಪಂಚಾಯತಿಗೆ ಅನುವು ಮಾಡುವುದು;

(xx) ಪ್ರತೀ ವರ್ಷ ಮುಂಗಾರು ಪೂರ್ವ ಮತ್ತು ಹಿಂಗಾರು ನಂತರ ಕಡ್ಡಾಯವಾಗಿ ನೀರಿನ ಮಾದರಿಗಳನ್ನು ಪರೀಕ್ಷೆ ಮಾಡಿಸಲು ಮತ್ತು ವರದಿಯನ್ನು ಗ್ರಾಮದ ಸಾರ್ವಜನಿಕ ಸ್ಥಳಗಳಲ್ಲಿ ಪ್ರಕಟಿಸಲು ಮತ್ತು ಆ ಮೂಲಕ ಕುಡಿಯುವ ನೀರಿನ ಗುಣಮಟ್ಟ ಕಾಯ್ದುಕೊಳ್ಳುವಲ್ಲಿ ಗ್ರಾಮ ಪಂಚಾಯತಿಗೆ ನೆರವಾಗುವುದು;

(xxi) ಸಮಿತಿಯು ಗ್ರಾಮವನ್ನು ಬಯಲು ಬಹಿರ್ದೆಸೆ ಮುಕ್ತ ಸ್ಥಿತಿಯಲ್ಲಿಡುವ ಮತ್ತು ಸುಸ್ಥಿರತೆ ಕಾಯ್ದುಕೊಳ್ಳುವ ಜವಾಬ್ದಾರಿಯನ್ನು ವಹಿಸಿಕೊಳ್ಳುವುದು;

(xxii) ಸಮುದಾಯ ಶೌಚಾಲಯ, ಶಾಲಾ, ಅಂಗನವಾಡಿ, ಸರ್ಕಾರಿ ಆಸ್ಪತ್ರೆಗಳು, ಇತರೆ ಸಾರ್ವಜನಿಕ ಸ್ಥಳಗಳಲ್ಲಿ ನಿರ್ಮಿಸಿರುವ ಶೌಚಾಲಯಗಳ ಬಳಕೆ ಮತ್ತು ನಿರ್ವಹಣೆ ಬಗ್ಗೆ ಮೇಲ್ವಿಚಾರಣೆ ನಡೆಸುವಲ್ಲಿ ಗ್ರಾಮ ಪಂಚಾಯತಿಗೆ ಸಹಕಾರ ನೀಡುವುದು;

(xxiii) ಗ್ರಾಮ ಸಭೆಯೊಂದಿಗೆ ಸಮಾಲೋಚನೆ ನಡೆಸಿ, ತನ್ನ ವ್ಯಾಪ್ತಿಯಲ್ಲಿನ ಗ್ರಾಮ/ ಜನವಸತಿಗಳ ನೀರು ಸರಬರಾಜು ಮತ್ತು ನೈರ್ಮಲ್ಯ ಸೌಕರ್ಯಗಳ ಕಾರ್ಯಾಚರಣೆ ಮತ್ತು ನಿರ್ವಹಣೆ ಕುರಿತು ಯೋಜನೆ ರೂಪಿಸುವಲ್ಲಿ ಗ್ರಾಮ ಪಂಚಾಯತಿಗೆ ಸಹಕಾರ ನೀಡುವುದು;

(xxiv) ಗ್ರಾಮದ ವ್ಯಾಪ್ತಿಯಲ್ಲಿ ಸೃಜಿಸಲಾದ ಮೂಲಭೂತ ಸೌಕರ್ಯಗಳ ಕಾರ್ಯಾಚರಣೆ ಮತ್ತು ಮೇಲ್ವಿಚಾರಣೆಗೆ ಹಾಗೂ ಸುಸ್ಥಿರ ನಿರ್ವಹಣೆಗೆ ಬಳಕೆದಾರರ ಶುಲ್ಕ ವಸೂಲಿ ಮಾಡುವಲ್ಲಿ ಗ್ರಾಮ ಪಂಚಾಯತಿಗೆ ಅನುವಾಗುವುದು;

(xxv) ಪ್ರತಿಯೊಂದು ಕುಟುಂಬವು / ವಿಭಾಗ ನೀರು ಸರಬರಾಜು ಮತ್ತು ನೈರ್ಮಲ್ಯ ಸೌಕರ್ಯಗಳನ್ನು ಸರಿಯಾದ ಪ್ರಮಾಣದಲ್ಲಿ ಪಡೆಯುತ್ತಿದೆಯೇ ಮತ್ತು ಅಂತಹ ಸೌಕರ್ಯ / ಸಂಪನ್ಮೂಲಗಳು ಸಂರಕ್ಷಿತವಾಗಿದೆಯೇ ಎಂಬುದನ್ನು ಖಾತರಿಪಡಿಸಿಕೊಳ್ಳುವುದು; ಮತ್ತು

(xxvi) ಅವಶ್ಯಕತೆ ಕಂಡು ಬಂದಾಗಲೆಲ್ಲಾ, ನೀರು ವಿತರಣಾ ವ್ಯವಸ್ಥೆ ಮೇಲ್ವಿಚಾರಣಾ ಯೋಜನೆಯನ್ನು ತಯಾರಿಸುವಲ್ಲಿ ಮತ್ತು ಪರಿಷ್ಕರಿಸುವಲ್ಲಿ ಗ್ರಾಮ ಪಂಚಾಯತಿಗೆ ಸಲಹೆ ನೀಡುವುದು.

7. ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಸಮಿತಿ ಸದಸ್ಯರುಗಳ ಅಧಿಕಾರಗಳು.- (1) **ಸಮಿತಿಯ ಅಧ್ಯಕ್ಷರು, ಉಪಾಧ್ಯಕ್ಷರು ಅಥವಾ ಸದಸ್ಯರು ವೈಯಕ್ತಿಕವಾಗಿ ಮತ್ತು ಒಟ್ಟಾಗಿ ನೀರು ಸರಬರಾಜು ಮತ್ತು ನೈರ್ಮಲ್ಯ ಕಾಮಗಾರಿಗಳ ಸಮರ್ಪಕ ಅನುಷ್ಠಾನದಲ್ಲಿ ಗ್ರಾಮ ಪಂಚಾಯತಿಗೆ ಅಗತ್ಯ ಸಹಕಾರ ನೀಡುವುದು. ಉಸ್ತುವಾರಿ ಮತ್ತು ನೀರು ಸರಬರಾಜು ಮತ್ತು ನೈರ್ಮಲ್ಯದ ಯಾವುದೇ ಕಾಮಗಾರಿಗಳಲ್ಲಿ ನಿರತರಾದ ಸಿಬ್ಬಂದಿ/ ಕೆಲಸಗಾರರ ಕಾರ್ಯನಿರ್ವಹಣೆ** ಬಗ್ಗೆ ತೃಪ್ತಿಕರವಾಗಿಲ್ಲದಿದ್ದ ಪಕ್ಷದಲ್ಲಿ ಅಂತಹ ಸಿಬ್ಬಂದಿ / ಕೆಲಸಗಾರರ ವಿರುದ್ಧ ನಿಯಮಾನುಸಾರ ಕ್ರಮ ಕೈಗೊಳ್ಳಲು ಗ್ರಾಮ ಪಂಚಾಯತಿಗೆ ಶಿಫಾರಸ್ಸು ಸಲ್ಲಿಸಬಹುದು.

(2) ಸಮಿತಿಯು ಗ್ರಾಮ ಸಮುದಾಯದಿಂದ ನೀರು ಸರಬರಾಜು ಮತ್ತು ನೈರ್ಮಲ್ಯ ಶುಲ್ಕ/ ಬಳಕೆ ಶುಲ್ಕವನ್ನು ವಸೂಲಿ ಮಾಡುವಲ್ಲಿ ಗ್ರಾಮ ಪಂಚಾಯಿತಿಗೆ ಸಹಕಾರ ನೀಡುವುದು ಮತ್ತು ಶುಲ್ಕಗಳನ್ನು ಪಾವತಿಸುವಂತೆ ಬಳಕೆದಾರರನ್ನು ಮನವೊಲಿಸುವುದು.

(3) ಗ್ರಾಮ ಪಂಚಾಯತಿಯು ಕುಡಿಯುವ ನೀರು ಸರಬರಾಜು ಯೋಜನೆಗಳ ಹಾಗೂ ಸ್ವಚ್ಛತೆ ನೈರ್ಮಲ್ಯ ರಕ್ಷಣೆಗಾಗಿ ಅನುಷ್ಠಾನಗೊಳಿಸುವ ಕಾರ್ಯಾಚರಣೆ ಮತ್ತು ಮೇಲ್ವಿಚಾರಣೆ ವೆಚ್ಚಗಳನ್ನು ಆಧರಿಸಿ, ಬಳಕೆ ಶುಲ್ಕವನ್ನು ನಿಗಧಿಪಡಿಸುವ ಸಂದರ್ಭದಲ್ಲಿ ಸಮಿತಿಯು ಗ್ರಾಮ ಪಂಚಾಯತಿಗೆ ಅಗತ್ಯ ಸಹಕಾರ ನೀಡುವುದು.

(4) ಸಮಿತಿಯ ಕಾರ್ಯಚಟುವಟಿಕೆಗಳ ಬಗ್ಗೆ ಸಮಿತಿಯ ಸದಸ್ಯ ಕಾರ್ಯದರ್ಶಿಯು ಪ್ರತಿ ತಿಂಗಳು ಗ್ರಾಮ ಪಂಚಾಯಿತಿಗೆ ವರದಿ ನೀಡುವುದು. ಈ ವರದಿಯ ಸಾರಾಂಶವನ್ನು ಪ್ರತಿ ಆರು ತಿಂಗಳಿಗೊಮ್ಮೆ ಪಂಚಾಯತಿ ಅಭಿವೃದ್ಧಿ ಅಧಿಕಾರಿಯು ಗ್ರಾಮ ಸಭೆಯಲ್ಲಿ ಮಂಡಿಸತಕ್ಕದ್ದು.

8. ಸಮಿತಿಯ ಸಭೆಗಳು.- (1) **ನೀರು ಸರಬರಾಜು, ಸ್ವಚ್ಛತಾ ಸೌಕರ್ಯಗಳ ಮೇಲ್ವಿಚಾರಣೆ ಕುರಿತ ಪರಿಶೀಲನೆ ಮತ್ತು ನೀರು ಸೋರಿಕೆ, ಪೈಪ್‌ಲೈನ್, ನಲ್ಲಿವಾಲ್ವ್ ಮುಂತಾದ ಘಟಕಗಳ ಭಾಗಗಳು ಹಾನಿಗೊಳಗಾಗಿದ್ದಲ್ಲಿ ಅವುಗಳನ್ನು ದುರಸ್ತಿಪಡಿಸುವ ಮಾರ್ಗೋಪಾಯಗಳಿಗಾಗಿ ಸಮಿತಿಯು ಎರಡು ತಿಂಗಳಿಗೆ ಒಂದು ಬಾರಿ ಅಥವಾ ಅನಿವಾರ್ಯಕಾರಣಗಳಿಂದಾಗಿ ಸಭೆ ಸೇರುವುದು ಅಗತ್ಯವೆಂದು ಕಂಡು ಬಂದಾಗಲೆಲ್ಲಾ ಮೂರು ದಿನಗಳು ಮುಂಚಿತವಾಗಿ ನೋಟೀಸು ನೀಡಿ ಸಭೆ ಸೇರತಕ್ಕದ್ದು.**

(2)ಸಮಿತಿಯ ಸಭೆಗಳನ್ನು ಅಧ್ಯಕ್ಷರು, ತಪ್ಪಿದಲ್ಲಿ ಉಪಾಧ್ಯಕ್ಷರು ಅಥವಾ ಸಮಿತಿ ಸದಸ್ಯ ಕಾರ್ಯದರ್ಶಿ ಕರೆಯತಕ್ಕದ್ದು. ಇವರುಗಳು ತುರ್ತು ಕಾರ್ಯನಿರ್ವಹಣೆಯ ಸಂದರ್ಭಗಳಲ್ಲಿ ಸಭೆಯನ್ನು ಕರೆಯದಿದ್ದಾಗ 1/3 ಭಾಗದ ಸದಸ್ಯರು ಮೂರು ದಿನಗಳು ಮುಂಚಿತವಾಗಿ ನೋಟೀಸು ನೀಡಿ ವಿಶೇಷಸಭೆಯನ್ನು ಕರೆಯಬಹುದು. ಈ ಸಮಿತಿಯು ತೆಗೆದುಕೊಂಡ ನಿರ್ಣಯಗಳನ್ನು ಗ್ರಾಮ ಪಂಚಾಯತಿ ಅಧ್ಯಕ್ಷರ ಗಮನಕ್ಕೆ ತರಬೇಕು ಹಾಗೂ ಈ ನಿರ್ಣಯದ ಅನುಷ್ಠಾನಕ್ಕೆ ಗ್ರಾಮ ಪಂಚಾಯತಿಯ ಅಧ್ಯಕ್ಷರು ಸೂಕ್ತ ಕ್ರಮ ವಹಿಸುವುದು. ಸಮಿತಿಯ ಸದಸ್ಯ ಕಾರ್ಯದರ್ಶಿಗಳು ಸಮಿತಿ ಸಭಾ ನಡವಳಿಯನ್ನು ನಿರ್ವಹಿಸಿಕೊಂಡು ಬರತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು
ಅವರ ಹೆಸರಿನಲ್ಲಿ

(ಬಿ. ನವೀನ್ ಕುಮಾರ್)
ಸರ್ಕಾರದ ಅಧೀನ ಕಾರ್ಯದರ್ಶಿ,(ಜಿ.ಪಂ.) (ಪ್ರ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

PR-338

GOVERNMENT OF KARNATAKA

No: RD 10 LRD 2019

Karnataka Government Secretariat
M.S Building
Bengaluru, Dated:03-09-2020

NOTIFICATION

Whereas the draft of the Notification No.RD 10 LRD 2019, dated: 11-02-2020 regarding alteration of the limits of Mangaluru B (Portion) and Panemangaluru (Portion) circle of Mangaluru and Bantwala Taluk of Dakshina Kannada District to constitute a new taluk called Ullala Taluk was published as required by section 6 of the Karnataka Land Revenue Act, 1964 (Karnataka Act No.12 of 1964) in part-IV-A of the Karnataka Gazette Extra-Ordinary, dated:27-02-2020 inviting objections or suggestion from all the persons likely to be affected thereby within thirty days from the date of its publication in the official Gazette.

Whereas the said Gazette was made available to the public on 27-02-2020.

Whereas no objections and suggestions have been received in this behalf by the State Government.

Now, therefore in exercise of the powers conferred by sub-section (4) of Section 4 of the Karnataka Land Revenue Act, 1964 (Karnataka Act 12 of 1964) the Government of Karnataka hereby makes the following notification, namely: -

SCHEDULE-I

The Circles and Villages Specified in column (2) and (3) of the table below shall be excluded from the limits of Mangaluru and Bantwala taluk of Dakshina Kannada District and to form a new Taluk called as **Ullala taluk** in Dakshina Kannada District:-

TABLE

Sl. No.	Name of Circle (Hobli)	Name of the Villages
(1)	(2)	(3)
(1)	Mangaluru-B (Portion) (From Mangaluru taluk)	(1) Permannur
		(2) Ullala
		(3) Manjanady
		(4) Konaje
		(5) Pavoor
		(6) Kinya
		(7) Talapady
		(8) Munnur
		(9) Harekala
		(10) Belma
(2)	Mangaluru-B (Portion) (From Mangaluru taluk)	(11) Boliyar
		(12) Someshwara
		(13) Amblamogaru
		(14) Kotekar
(3)	Panemangaluru Portion) (From Bantwala taluk)	(15) Naringana
		(16) Balepuni
		(17) Kairangala
		(18) Pajeer
		(19) Kurnadu
		(20) Sajipanadu
		(21) Ira
		(22) Sajipapadu
		(23) Chelur

Boundary details of newly formed Ullala taluk of Dakshina Kannada District.

East:	Bantwala Taluk	West: Arabian Sea
North	Mangaluru Taluk	South: Kerala State

SCHEDULE-II

After formation of new taluk of Ullala as specified in Schedule-I, the remaining circles and villages specified in column (2) and (3) of the table below shall continue to remain in Mangaluru taluk in Dakshina Kannada District:-

TABLE

Sl.No.	Name of Circle	Name of Village
(1)	(2)	(3)
(1)	Mangaluru-A	(1) Kasbabazar
		(2) Padavu
		(3) Attavara
		(4) Mangaluru Thota
		(5) Kasba Bengre
		(6) Kadri A
		(7) Kadri B
		(8) Jeppinamogaru A
		(9) Jeppinamogaru B
		(10) Kodialbail A
		(11) Kodialbail B
		(12) Boloor A
		(13) Boloor B
		(14) Bajal
		(Villages of Mangaluru- B Circle) (15) Kannur
		(16) Derebail
		(17) Bangrakulur
		(18) Padukodi
		(19) Kankanady A
		(20) Kankanady B
		(21) Alape
		(22) Maroli
(2)	Surathkal	(23) Tenka Yekkar
		(24) Badaga Yekkar
		(25) Permude
		(26) Kuthethur
		(27) Delanthabettu
		(28) Soorinje
		(29) Madhya
		(30) Chelairu
		(31) Surathkal
		(32) Idya
		(33) Hosabettu
		(34) Kulai

		(35) Panambur
		(36) Tannirbavi
		(37) Kavoor
		(38) Marakada
		(39) Moodushedde
		(40) Padushedde
		(41) Kunjathabail
		(42) Panjimogaru
		(43) 62 Thokur
		(44) Bala
		(45) Kalavar
		(46) Bajpe
		(47) Kenjar
		(48) Malavoor
		(49) Katipalla
		(50) Baikampady
(3)	Gurupura	(51) Badaga Yedapadavu
		(52) Tenka Yedapadavu
		(53) Adyar
		(54) Arkula
		(55) Muchur
		(56) Kompadavu
		(57) Muthuru
		(58) Kilinjaru
		(59) Kolavuru
		(60) Tenka Ulipady
		(61) Badaga Ulipady
		(62) Mogaru
		(63) Mooduperar
		(64) Paduperar
		(65) Addoor
		(66) Moolur
		(67) Ulaibettu
		(68) Mallur
		(69) Adyapady
		(70) Kolambe
		(71) Kandavara
		(72) Kudupu
		(73) Pachanady
		(74) Tiruvail
		(75) Neerumarga
		(76) Bondanthila

Boundary details of Mangaluru taluk of Dakshina Kannada District after alteration and formation of new taluk Ullala.

East :	Moodabidiri taluk	West :	Arabian Sea
North:	Proposed Mulki taluk	South :	Proposed Ullala taluk

SCHEDULE-III

After formation of new taluk Ullala specified in Schedule-I, the remaining circles and villages specified in column (2) and (3) of the table below shall continue to remain in Bantwala taluk in Dakshina Kannada District:-

TABLE

Sl.No.	Name of Circle	Name of Village
(1)	(2)	(3)
(1)	Bantwala	(1) Karpe
		(2) Sangabettu
		(3) Kukkipady
		(4) Yeliyandugodu
		(5) Chennaithodi
		(6) Ajjibettu
		(7) Pilathabettu
		(8) Irvatthuru
		(9) Kudambettu
		(10) Pilimogru
		(11) Budoli
		(12) Koila
		(13) Rayi
		(14) Arala
		(15) Kuriyala
		(16) Amtady
		(17) Panjikal
		(18) B Kasba
		(19) Mudanadugodu
		(20) Kadabettu
		(21) Kavalapaduru
		(22) Mudapadukodi
		(23) Kavalamuduru
		(24) Badagakajekaru
		(25) Tenkakajekaru

		(26) Uli
		(27) Maninalkuru
		(28) Devasyamuduru
		(29) Sarapady
		(30) Devasyapaduru
		(31) Navoor
(2)	Panemangaluru	(32) Badagabelluru
		(33) Kariyangala
		(34) Ammunje
		(35) Thenkabelluru
		(36) Narikombu
		(37) Bantwal Mooda
		(38) Kadeswalya
		(39) Golthamajal
		(40) Amturu
		(41) Sajipamooda
		(42) Manchi
		(43) Kallige
		(44) Sajipa Munnuru
		(45) Panemangaluru
		(46) Shamburu
		(47) Balthila
		(48) Barimaru
		(49) Thumbe
		(50) Pudu
		(51) Kodman
		(52) Meramajalu
(3)	Vitla	(53) Vitlakasba
		(54) Idkidu
		(55) Kedila
		(56) Perne
		(57) Biliyuru
		(58) Kula
		(59) Vitla Mudnuru
		(60) Alike
		(61) Peruvayi
		(62) Manila
		(63) Kepu
		(64) Punacha
		(65) Peraje
		(66) Mani
		(67) Bolanthuru
		(68) Veerakamba

		(69) Ananthadi
		(70) Kanyana
		(71) Karopady
		(72) Kolnadu
		(73) Saletthuru
		(74) Vitla Padnuru
		(75) Netlamudnuru

Boundary details of Bantwala Taluk of Dakshina Kannada District after alteration and formation of new taluk Ullala.

East :	Belthangadi and Puttur taluk	West :	Mangaluru taluk
North:	Moodubidiri taluk	South:	Kerala State

The above shall come into effect from the date of publication of this notification in the official Gazette.

By order and in the name of the
Government of Karnataka

(V.T RAJYASHREE)
Under Secretary to Government
Revenue Department (SSLR)

PR-339

ಕರ್ನಾಟಕ ಸರ್ಕಾರ

ಸಂಖ್ಯೆ: ಗ್ರಾಅಪ 870 ಗ್ರಾಪಂಅ 2019

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ
ಬೆಂಗಳೂರು, ದಿನಾಂಕ:11-09-2020.

ಅಧಿಸೂಚನೆ

ಕರ್ನಾಟಕ ಗ್ರಾಮ ¸gÁeï ªÀvÀ ¥AZÁAiÀvï gÁeï ಅಧಿನಿಯಮ, 1993 (1993ರ ಕರ್ನಾಟಕ ಅಧಿನಿಯಮ ಸಂಖ್ಯೆ 14) ರಪ್ರಕರಣ 58, 61A, 75, 76, 84, 89, 90, 91, 92, 99, 104, 105, 106, 108, 109 ಮತ್ತು 110ನೇ ಪ್ರಕರಣಗಳೊಂದಿಗೆ ಓದಿಕೊಂಡಂತೆ ಪ್ರಕರಣ 311ರ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಈ ಕೆಳಕಂಡಂತೆ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ಗ್ರಾಮ ಆರೋಗ್ಯ, ನೈರ್ಮಲ್ಯ ಮತ್ತು ಪೌಷ್ಟಿಕ ಸಮಿತಿ) ನಿಯಮಗಳು, 2020 ರ ಕರಡನ್ನು ಸದರಿ ಅಧಿನಿಯಮದ ಪ್ರಕರಣ 311ರ ಉಪ ಪ್ರಕರಣ (1) ರಲ್ಲಿ ನಿಗದಿಪಡಿಸಿದಂತೆ, ಇದರಿಂದ ಬಾಧಿತರಾಗುವ ಎಲ್ಲಾ ವ್ಯಕ್ತಿಗಳ ಮಾಹಿತಿಗಾಗಿ ಈ ಮೂಲಕ ಪ್ರಕಟಿಸಲಾಗಿದೆ ಮತ್ತು ಸದರಿ ಕರಡನ್ನು ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಿತವಾದ ದಿನಾಂಕದಿಂದ ಮೂವತ್ತು ದಿನಗಳ ನಂತರ ಪರಿಗಣನೆಗೆ ತೆಗೆದುಕೊಳ್ಳಲಾಗುವುದೆಂದು ಈ ಮೂಲಕ ಸೂಚಿಸಲಾಗಿದೆ.

ಮೇಲೆ ನಿರ್ದಿಷ್ಟಪಡಿಸಿದ ಅವಧಿಯು ಮುಕ್ತಾಯವಾಗುವ ಮೊದಲು ಸದರಿ ಕರಡು ನಿಯಮಗಳಿಗೆ ಸಂಬಂಧಿಸಿದಂತೆ ಯಾವೊಬ್ಬ ವ್ಯಕ್ತಿಯಿಂದ ರಾಜ್ಯ ಸರ್ಕಾರವು ಸ್ವೀಕರಿಸ ಬಹುದಾದ ಯಾವುದೇ ಆಕ್ಷೇಪಣೆ ಮತ್ತು ಸಲಹೆಗಳನ್ನು ರಾಜ್ಯ ಸರ್ಕಾರವು ಪರಿಗಣಿಸುವುದು. ಆಕ್ಷೇಪಣೆ ಅಥವಾ ಸಲಹೆಗಳನ್ನು ಸರ್ಕಾರದ ಪ್ರಧಾನ ಕಾರ್ಯದರ್ಶಿ,(ಪಂಚಾಯತ್‌ರಾಜ್)

ಗ್ರಾಮೀಣಾಭಿವೃದ್ಧಿ ಮತ್ತು ¥AZÁAiÀÄvï gÁeï 3ನೇಹಂತ, 3 ನೇಮಹಡಿ, ಬಹುಮಹಡಿಗಳ ಕಟ್ಟಡ, ಡಾ|| ಅಂಬೇಡ್ಕರ್ ವೀದಿ, ಬೆಂಗಳೂರು-01 ಇವರಿಗೆ ಕಳುಹಿಸಲು ಕೋರಲಾಗಿದೆ.

ಕರಡು ನಿಯಮಗಳು

1. ಹೆಸರು ಮತ್ತು ಪ್ರಾರಂಭ.- (1) ಈ ನಿಯಮಗಳನ್ನು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ಗ್ರಾಮ ಆರೋಗ್ಯ, ನೈರ್ಮಲ್ಯ ಮತ್ತು ಪೌಷ್ಟಿಕ ಸಮಿತಿ) ನಿಯಮಗಳು, 2020 ಎಂದು ಕರೆಯತಕ್ಕದ್ದು.

(2) ಇವು ರಾಜ್ಯಪತ್ರದಲ್ಲಿ ಅಂತಿಮವಾಗಿ ಪ್ರಕಟಿಸಿದ ದಿನಾಂಕದಿಂದ ಜಾರಿಗೆಬರುತ್ತದೆ.

2. ಪರಿಭಾಷೆಗಳು.- ಈ ನಿಯಮಗಳಲ್ಲಿ ವಿಷಯಕ್ಕೆ ಅಥವಾ ಸಂದರ್ಭಕ್ಕೆ ಬೇರೆ ಅರ್ಥದ ಅಗತ್ಯ ಇರದಿದ್ದರೆ.-

(ಎ) "ಅಧಿನಿಯಮ" ಎಂದರೆ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993.(1993 g P£ÁðlP C¢¤AiÀÄªÀ ¸ASÉ 14);

(ಬಿ) "ಅಧ್ಯಕ್ಷರು" ಎಂದರೆ ಸಂಬಂಧಪಟ್ಟ ಗ್ರಾಮದ ಚುನಾಯಿತ ಗ್ರಾಮ ಪಂಚಾಯತಿ ಸದಸ್ಯರುಗಳಿಂದ ಗ್ರಾಮ ಪಂಚಾಯತಿ ಮೂಲಕ ಆಯ್ಕೆಯಾದ ಗ್ರಾಮ ಆರೋಗ್ಯ, ನೈರ್ಮಲ್ಯ ಮತ್ತು ಪೌಷ್ಟಿಕ ಸಮಿತಿ ಅಧ್ಯಕ್ಷ;

(ಸಿ) "ಉಪಾಧ್ಯಕ್ಷರು" ಎಂದರೆ ಗ್ರಾಮ ಆರೋಗ್ಯ, ನೈರ್ಮಲ್ಯ ಮತ್ತು ಪೌಷ್ಟಿಕ ಸಮಿತಿಯ ಉಪಾಧ್ಯಕ್ಷ (ಸಮಿತಿಯ ಸದಸ್ಯರುಗಳಿಂದ ಆಯ್ಕೆಯಾದ ಆ ಗ್ರಾಮದ ಗ್ರಾಮ ಪಂಚಾಯತಿ ಒಬ್ಬ ಸದಸ್ಯ);

(ಡಿ) "ಗ್ರಾಮ" ಎಂದರೆ ಕಂದಾಯ ಇಲಾಖೆಯು ಗುರುತಿಸಿರುವ ಕಂದಾಯ ಗ್ರಾಮ ಹಾಗೂ ಅದರೊಡನೆ ಹೊಂದಿಕೊಂಡಿರುವ ಉಪ ಗ್ರಾಮಗಳು; ಮತ್ತು

(ಇ) "ಸಮಿತಿ" ಎಂದರೆ ನಿಯಮ 3 ರಡಿಯಲ್ಲಿ ರಚಿಸಲ್ಪಟ್ಟ ಗ್ರಾಮ ಆರೋಗ್ಯ, ನೈರ್ಮಲ್ಯ ಮತ್ತು ಪೌಷ್ಟಿಕ ಸಮಿತಿ.

(ಎಫ್) "ಸಮಿತಿ ಕಾರ್ಯದರ್ಶಿ" ಈ ಗ್ರಾಮದ ವ್ಯಾಪ್ತಿಯ ಆಶಾ ಕಾರ್ಯಕರ್ತೆ (ಒಬ್ಬರಿಗಿಂತ ಹೆಚ್ಚು ಆಶಾ ಕಾರ್ಯಕರ್ತೆಯರಿದ್ದರೆ ಹಿರಿತನ ಮತ್ತು ಅರ್ಹತೆಯ ಮೇಲೆ ಸಮಿತಿಯು ಆಯ್ಕೆ ಮಾಡಿದ ಆಶಾ ಕಾರ್ಯಕರ್ತೆ).

3. ಗ್ರಾಮ ಆರೋಗ್ಯ, ನೈರ್ಮಲ್ಯ ಮತ್ತು ಪೌಷ್ಟಿಕ ಸಮಿತಿಯ ರಚನೆ.- (1) ಗ್ರಾಮ ಆರೋಗ್ಯ, ನೈರ್ಮಲ್ಯ ಮತ್ತು ಪೌಷ್ಟಿಕ ಸಮಿತಿಯು ಈ ಕೆಳಕಂಡ ಸದಸ್ಯರನ್ನು ಒಳಗೊಂಡಿರತಕ್ಕದ್ದು.-

PÀ	¸ÀzÀgÀ	¥ÀzÀ£ÁªÀ
(1)	ಗ್ರಾಮದ ಗ್ರಾಮ ಪಂಚಾಯತಿ ಸದಸ್ಯರಲ್ಲಿ ಗ್ರಾಮ ಪಂಚಾಯತಿಯು ಆಯ್ಕೆ ಮಾಡಿದ ಸದಸ್ಯ.	ಅಧ್ಯಕ್ಷರು
(2)	ಗ್ರಾಮದ ಗ್ರಾಮ ಪಂಚಾಯತಿ ಸದಸ್ಯರಲ್ಲಿ ಗ್ರಾಮ ಪಂಚಾಯತಿಯು ಆಯ್ಕೆ ಮಾಡಿದ ಸದಸ್ಯ. (ಸದಸ್ಯರು ಇಬ್ಬರಿಗಿಂತ ಹೆಚ್ಚಾದಲ್ಲಿ ಗ್ರಾಮ ಪಂಚಾಯತಿ ಮೂಲಕ ಆಯ್ಕೆ ಮಾಡುವುದು)	ಉಪಾಧ್ಯಕ್ಷರು
(3)	ಗ್ರಾಮ ಸಭೆಯಿಂದ ಆಯ್ಕೆಯಾದ ಈ ಕೆಳಕಂಡ ವರ್ಗದ 15 ಸದಸ್ಯರು. ಇವರಲ್ಲಿ ಕನಿಷ್ಠ 8 ಜನ ಮಹಿಳೆಯರು, ಕನಿಷ್ಠ 3 ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡದವರು, ಇಬ್ಬರು ಸ್ತ್ರೀಶಕ್ತಿ ಸ್ವಸಹಾಯ ಸಂಘದ ಸದಸ್ಯರು, ಗ್ರಾಮದಲ್ಲಿ ಆರೋಗ್ಯ, ನೈರ್ಮಲ್ಯ ಮತ್ತು ಪೌಷ್ಟಿಕತೆಗೆ ಸಂಬಂಧಿಸಿದ ವಿಷಯದಲ್ಲಿ ಪರಿಣಿತಿಯುಳ್ಳ ಸರ್ಕಾರೇತರ ಸ್ವಯಂ ಸೇವಾ ಸಂಸ್ಥೆಗಳ ಪ್ರತಿನಿಧಿ-ಒಬ್ಬರು, ಗ್ರಾಮದ ಯುವತಿ/ಯುವಕ ಮಂಡಳದ ಪ್ರತಿನಿಧಿ-ತಲಾ ಒಬ್ಬರು.	¸ÀzÀgÀ

(4)	ಆಯಾ ಗ್ರಾಮಕ್ಕೆ ಸಂಬಂಧಿಸಿದ ಕಿರಿಯ ಮಹಿಳಾ ಆರೋಗ್ಯ ಸಹಾಯಕಿ, ಕಿರಿಯ ಪುರುಷ ಆರೋಗ್ಯ ಸಹಾಯಕ, ಪ್ರಾಥಮಿಕ ಶಾಲಾ ಶಿಕ್ಷಕರು-ಒಬ್ಬರು (ಮಹಿಳೆಯರಿಗೆ ಆದ್ಯತೆ), ಗ್ರಾಮದಲ್ಲಿರುವ ಎಲ್ಲಾ ಅಂಗನವಾಡಿ ಮತ್ತು ಆಶಾ ಕಾರ್ಯಕರ್ತೆಯರು.	ಪದನಿಮಿತ್ತ ಸದಸ್ಯರು
(5)	ಗ್ರಾಮದ ವ್ಯಾಪ್ತಿಯ ಆಶಾ ಕಾರ್ಯಕರ್ತೆಯರಲ್ಲಿ ಸಮಿತಿಯು ಆಯ್ಕೆ ಮಾಡಿದ ಆಶಾ ಕಾರ್ಯಕರ್ತೆ	ಸದಸ್ಯ ಕಾರ್ಯದರ್ಶಿ

(2) ಸಮಿತಿಯ ಯಾವೊಬ್ಬ ಸದಸ್ಯರಿಗೂ ಗೌರವಧನ ಅಥವಾ ಇತರೆ ಸಂಭಾವನೆ ಇರುವುದಿಲ್ಲ.

4. ಸದಸ್ಯತ್ವದ ಅವಧಿ.-(1) ಈ ಸಮಿತಿಯಲ್ಲಿನ ಗ್ರಾಮಪಂಚಾಯತಿ ಸದಸ್ಯರುಗಳ ಅವಧಿ ಸಮಿತಿ ರಚನೆಯಾದ ದಿನಾಂಕದಿಂದ ಮೂರು ವರ್ಷಗಳ ಅವಧಿಯಾಗಿರತಕ್ಕದ್ದು. ಅಥವಾ ಗ್ರಾಮ ಪಂಚಾಯತಿಯು, ಯಾವುದಾದರೂ ಕಾರಣಗಳಿಂದ ಅದರ ಅವಧಿಯು ಮುಕ್ತಾಯವಾದಲ್ಲಿ ಇದರಲ್ಲಿ ಯಾವುದು ಮೊದಲೋ ಆ ಅವಧಿಯವರೆಗೆ ಕಾರ್ಯನಿರ್ವಹಿಸುವುದು.

(2) ¸«ÄwAiÄ ನಾಮನಿರ್ದೇಶಿತ ಸದಸ್ಯರುಗಳ ಅವಧಿಯು ನಾಮನಿರ್ದೇಶಿತ ದಿನಾಂಕದಿಂದ ಮೂರು ವರ್ಷಗಳ ಅವಧಿಗೆ ಇರತಕ್ಕದ್ದು. ಗ್ರಾಮ ಪಂಚಾಯತಿಯ ಅವಧಿಯು ಮುಕ್ತಾಯವಾದರೂ ಮತ್ತೆ ಗ್ರಾಮ ಪಂಚಾಯತಿಯ ರಚನೆಯಾಗುವವರೆಗೂ, ಸಮಿತಿಯ ಇತರ ಸದಸ್ಯರುಗಳು ಸಮಿತಿಯ ಜವಾಬ್ದಾರಿಗಳನ್ನು ನಿರ್ವಹಿಸತಕ್ಕದ್ದು.

5. ಸಮಿತಿಯ ಕಾರ್ಯವಿಧಾನ.- (1) ಗ್ರಾಮ ಆರೋಗ್ಯ, ನೈರ್ಮಲ್ಯ ಮತ್ತು ಪೌಷ್ಟಿಕ ಸಮಿತಿಯು ಪ್ರತಿ ತಿಂಗಳಿಗೊಮ್ಮೆ ಸಭೆ ಸೇರುವುದು ಅಥವಾ ಅವಶ್ಯವಿದ್ದಾಗ ಅಧ್ಯಕ್ಷರು ಮೂರು ದಿನಗಳು ಮುಂಚಿತವಾಗಿ ನೋಟೀಸ್ ನೀಡಿ ವಿಶೇಷ ಸಭೆ ಕರೆಯಬಹುದು.

(2) ಸಮಿತಿಯ ಸಭೆಯ ಕೋರಂ ಪದನಿಮಿತ್ತ ಸದಸ್ಯರನ್ನು ಹೊರತುಪಡಿಸಿ 1/3 ಭಾಗದ ಸದಸ್ಯರು ಆಗಿರತಕ್ಕದ್ದು.

(3) ಈ ಸಮಿತಿಯು ತೆಗೆದುಕೊಂಡ ನಿರ್ಣಯಗಳನ್ನು ಸಮಿತಿಯ ಕಾರ್ಯದರ್ಶಿಯು ನಿರ್ಣಯಗಳ ಮೇಲೆ ಕೈಗೊಂಡ ಕ್ರಮಗಳ ಸಮೇತ ಗ್ರಾಮ ಪಂಚಾಯತಿಗೆ ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಮೇಲಧಿಕಾರಿಗಳಿಗೆ ವರದಿ ಮಾಡುವುದು.

6. ಸಮಿತಿಯ ಉದ್ದೇಶಗಳು.- (1) ಗ್ರಾಮದಲ್ಲಿ ಆರೋಗ್ಯ, ನೈರ್ಮಲ್ಯ ಮತ್ತು ಪೌಷ್ಟಿಕಾಂಶದ ಮಹತ್ವದ ಬಗ್ಗೆ ತಿಳುವಳಿಕೆ ಮೂಡಿಸುವುದು.

(2) ಗ್ರಾಮದಲ್ಲಿ ಆರೋಗ್ಯ, ನೈರ್ಮಲ್ಯ ಮತ್ತು ಪೌಷ್ಟಿಕಾಂಶದ ಬಗ್ಗೆ ಇರುವ ಸರ್ಕಾರದ ಯೋಜನೆಗಳ ಬಗ್ಗೆ ಜನರಲ್ಲಿ ಅರಿವು ಮೂಡಿಸುವುದು. ಆರೋಗ್ಯ, ನೈರ್ಮಲ್ಯ ಮತ್ತು ಪೌಷ್ಟಿಕಾಂಶ ಯೋಜನೆಗಳ ಬಗ್ಗೆ ಸರ್ಕಾರದ ಪ್ರಚಾರ ಸಾಮಗ್ರಿಗಳನ್ನು ಪ್ರಚುರಪಡಿಸುವುದು. ಶಾಲೆ, ಅಂಗನವಾಡಿ, ಆಸ್ಪತ್ರೆಗಳಲ್ಲಿ ಹೆಚ್ಚಿನ ಮಟ್ಟದಲ್ಲಿ ತಿಳುವಳಿಕೆ ಮೂಡಿಸುವುದು.

(3) ಗ್ರಾಮದಲ್ಲಿ ಆರೋಗ್ಯ, ನೈರ್ಮಲ್ಯ ಮತ್ತು ಪೌಷ್ಟಿಕಾಂಶದ ಬಗ್ಗೆ ಇರುವ ಸರ್ಕಾರದ ಯೋಜನೆಗಳ ಪ್ರಯೋಜನಗಳು ಜನರಿಗೆ ತಲುಪುವಂತೆ ಮಾಡುವುದು.

(4) ಗ್ರಾಮದ ಆರೋಗ್ಯ ಯೋಜನೆಗಳ ಪ್ರಯೋಜನಗಳಿಗೆ ಸಂಬಂಧಿಸಿದಂತೆ ಗ್ರಾಮ ಸಭೆಯಲ್ಲಿ ಅರ್ಹ ಫಲಾನುಭವಿಗಳ ಆಯ್ಕೆಗೆ ಕ್ರಮ ವಹಿಸುವುದು.

(5) ಹೆಚ್.ಐ.ವಿ/ಏಡ್ಸ್ ಮತ್ತಿತರ ಸೋಂಕು ರೋಗಗಳ ಬಗ್ಗೆ ಇರುವ ತಪ್ಪು ತಿಳುವಳಿಕೆ ಹೋಗಲಾಡಿಸಿ ಅವುಗಳನ್ನು ತಡೆಗಟ್ಟುವ ಕೆಲಸದಲ್ಲಿ ಜನರ ವಿಶ್ವಾಸ ಮತ್ತು ಪಾಲುದಾರಿಕೆ ಹೆಚ್ಚಿಸುವುದು.

(6) ಗ್ರಾಮದ ಆರೋಗ್ಯ, ನೈರ್ಮಲ್ಯ ಮತ್ತು ಪೌಷ್ಠಿಕಾಂಶದ ಯೋಜನೆಗಳ ಅನುಷ್ಠಾನದಲ್ಲಿ ಸಮುದಾಯದ ಸಹಬಾಗಿತ್ವ ಪಡೆಯುವುದು.

7. ಸಮಿತಿಯ ಪ್ರಕಾರ್ಯಗಳು.- (1) ಗ್ರಾಮದ ಆರೋಗ್ಯ, ನೈರ್ಮಲ್ಯ ಮತ್ತು ಪೌಷ್ಠಿಕತೆಯ ಸ್ಥಿತಿಗತಿಗಳ ಬಗ್ಗೆ ಅಧ್ಯಯನ ಮಾಡಿ ವಸ್ತುಸ್ಥಿತಿ ವರದಿ ಸಿದ್ಧಪಡಿಸುವುದು.

(2) ಗ್ರಾಮದ ಆರೋಗ್ಯ, ನೈರ್ಮಲ್ಯ ಮತ್ತು ಪೌಷ್ಠಿಕತೆಯ ಸ್ಥಿತಿಗತಿಗಳಲ್ಲಿ ಇರುವ ಕೊರತೆಗಳ ಬಗ್ಗೆ ಪಟ್ಟಿ ಮಾಡುವುದು.

(3) ಗ್ರಾಮದ ಆರೋಗ್ಯ, ನೈರ್ಮಲ್ಯ ಮತ್ತು ಪೌಷ್ಠಿಕತೆ ಬಗ್ಗೆ ವಾರ್ಷಿಕ ಸಮಗ್ರ ಕ್ರಿಯಾ ಯೋಜನೆ ತಯಾರಿಸುವುದು.

(4) ಗ್ರಾಮದ ಆರೋಗ್ಯ, ನೈರ್ಮಲ್ಯ ಮತ್ತು ಪೌಷ್ಠಿಕತೆ ಬಗ್ಗೆ ಸರ್ಕಾರದ ವಿವಿಧ ಯೋಜನೆಗಳಲ್ಲಿ ದೊರಕುವ ಸೌಲಭ್ಯಗಳ ಬಗ್ಗೆ ಕ್ರಿಯಾ ಯೋಜನೆಯಲ್ಲಿ ಅವಕಾಶ ಕಲ್ಪಿಸುವುದು.

(5) ಕೊರತೆ ಇರುವ ಸಂಪನ್ಮೂಲವನ್ನು ಸಾರ್ವಜನಿಕ ವಂತಿಗೆ, ಸಹಭಾಗಿತ್ವಗಳಿಂದ ಪಡೆಯಲು ಕ್ರಮ ಕೈಗೊಳ್ಳುವುದು.

(6) ಗ್ರಾಮದ ಎಲ್ಲಾ ಜನರಿಗೆ ಶುದ್ಧವಾದ ಕುಡಿಯುವ ನೀರು ದೊರೆಯುತ್ತಿರುವ ಬಗ್ಗೆ ಖಾತ್ರಿಪಡಿಸಿಕೊಳ್ಳುವುದು.

(7) ಗ್ರಾಮದ ಪ್ರತೀ ಕುಟುಂಬಗಳಿಗೂ ಶೌಚಾಲಯ ಇರುವ ಬಗ್ಗೆ ಮತ್ತು ಬಳಸುತ್ತಿರುವ ಬಗ್ಗೆ ಖಾತ್ರಿಪಡಿಸಿಕೊಳ್ಳುವುದು.

(8) ಗ್ರಾಮದ ಶಾಲೆಗಳಲ್ಲಿ ಮಧ್ಯಾಹ್ನದ ಬಿಸಿಯೂಟ, ಅಂಗನವಾಡಿಗಳಲ್ಲಿ ಪೌಷ್ಠಿಕ ಆಹಾರ ದೊರಕುತ್ತಿರುವ ಬಗ್ಗೆ ಖಾತ್ರಿಪಡಿಸಿಕೊಳ್ಳುವುದು.

(9) ಗ್ರಾಮದ ಗರ್ಭಿಣಿಯರು, ಬಾಣಂತಿಯರಿಗೆ ದೊರಕುತ್ತಿರುವ ಪೌಷ್ಠಿಕ ಆಹಾರ ಸೇರಿದಂತೆ ಎಲ್ಲಾ ಸೌಲಭ್ಯಗಳು ದೊರಕುತ್ತಿರುವ ಬಗ್ಗೆ ಖಾತ್ರಿಪಡಿಸಿಕೊಳ್ಳುವುದು.

(10) ಗ್ರಾಮದ ಎಲ್ಲಾ ಪ್ರದೇಶದಲ್ಲಿ ರಸ್ತೆ, ಚರಂಡಿ, ಸಾರ್ವಜನಿಕ ಸ್ಥಳಗಳಲ್ಲಿ ಶುಚಿತ್ವ ಕಾಪಾಡುವ ಬಗ್ಗೆ ಖಾತ್ರಿಪಡಿಸಿಕೊಳ್ಳುವುದು.

(11) ಗ್ರಾಮದ ವ್ಯಾಪ್ತಿಯ ಸಾರ್ವಜನಿಕ ಕೆರೆ, ಕುಂಟೆ, ತೆರೆದ ಬಾವಿ, ಕೊಳವೆ ಬಾವಿಗಳಲ್ಲಿ (ಬೋರ್‌ವೆಲ್) ನೀರು ಮಲೀನವಾಗದಂತೆ ಕ್ರಮ ಕೈಗೊಳ್ಳುವುದು.

(12) ಪ್ರತಿ ತಿಂಗಳ ಮೂರನೇ ಶನಿವಾರದಂದು, ಗ್ರಾಮದಲ್ಲಿ 'ಗ್ರಾಮ ಆರೋಗ್ಯ ಮತ್ತು ಪೌಷ್ಠಿಕ ದಿನ' ಆಚರಿಸಿ ಗ್ರಾಮಸ್ಥರು ಈ ಕಾರ್ಯಕ್ರಮದಲ್ಲಿ ಸಕ್ರಿಯವಾಗಿ ಭಾಗವಹಿಸುವಂತೆ ಕ್ರಮ ವಹಿಸುವುದು.

(13) ಗ್ರಾಮದಲ್ಲಿ ಅಪೌಷ್ಠಿಕತೆಯಿಂದ ಬಳಲುತ್ತಿರುವ ಎಲ್ಲಾ ಮಕ್ಕಳನ್ನು ಪ್ರಾರಂಭಿಕ ಹಂತದಲ್ಲಿ ಪತ್ತೆ ಹಚ್ಚಿ ಅಂತಹ ಮಕ್ಕಳಿಗೆ ಹತ್ತಿರದ ಪೌಷ್ಠಿಕ ಪುನರ್ವಸತಿ ಕೇಂದ್ರದಲ್ಲಿ ಚಿಕಿತ್ಸೆ/ಉಪಚಾರ ಮಾಡಿಸಿ, ಆ ಮಕ್ಕಳು ಗ್ರಾಮಕ್ಕೆ ಹಿಂತಿರುಗಿದ ನಂತರ ಅವರು ಸಾಮಾನ್ಯ ಪೌಷ್ಠಿಕ ಮಟ್ಟ ತಲುಪುವವರೆಗೆ ನಿಗಾವಹಿಸುವುದು.

(14) ಗ್ರಾಮದಲ್ಲಿ ಅಂಗನವಾಡಿಯು ನೀಡುತ್ತಿರುವ ಸೇವೆಗಳನ್ನು ಮೇಲ್ವಿಚಾರಣೆ ನಡೆಸುವುದು ಮತ್ತು ಗ್ರಾಮದ ಮಹಿಳೆಯರ ಮತ್ತು ಮಕ್ಕಳ ಪೌಷ್ಠಿಕ ಮಟ್ಟವನ್ನು ಉತ್ತಮಪಡಿಸಲು ಸಹಕರಿಸುವುದು.

(15) ಗ್ರಾಮದಲ್ಲಿ ಸಾಂಕ್ರಾಮಿಕ ರೋಗಗಳ ನಿವಾರಣೆಗೆ ಸಾರ್ವತ್ರಿಕ ಚುಚ್ಚುಮದ್ದು ಕಾರ್ಯಕ್ರಮ ನಿಯಮಿತವಾಗಿ ನಡೆಯುವಂತೆ ಕ್ರಮ ವಹಿಸುವುದು.

(16) ಆರೋಗ್ಯ ಸಹಾಯಕರು (ಕಿರಿಯ ಆರೋಗ್ಯ ಸಹಾಯಕಿ/ಸಹಾಯಕ, ಆಶಾ ಕಾರ್ಯಕರ್ತೆಯರು) ನಿಯಮಿತವಾಗಿ ಗ್ರಾಮಕ್ಕೆ ಭೇಟಿ ನೀಡುವಂತೆ ನೋಡಿಕೊಳ್ಳಬೇಕು, ಆ ಮೂಲಕ ಜನರಿಗೆ ಆರೋಗ್ಯ ಸೇವೆ ಮತ್ತು ಸೌಲಭ್ಯಗಳ ಬಗ್ಗೆ ಮಾಹಿತಿ ಸಿಗುವಂತೆ ಮಾಡಬೇಕು.

(17) ಗರ್ಭಿಣಿ ಮಹಿಳೆಯರಿಗೆ ತುರ್ತಾಗಿ ಆಸ್ಪತ್ರೆಗೆ ಹೋಗಬೇಕಾದಾಗ ವಾಹನ ಸೌಲಭ್ಯದ ವ್ಯವಸ್ಥೆ ಮಾಡುವುದು,

(18) ಪ್ರತಿ ಅಂಗನವಾಡಿ ಕೇಂದ್ರಗಳಲ್ಲಿ ಬಾಲವಿಕಾಸ ಸಮಿತಿ ರಚಿಸುವುದು ಮತ್ತು ಅಂಗನವಾಡಿಗಳಿಗೆ ಬೇಕಾದ ಸಹಾಯ, ನೆರವು ನೀಡುವುದು ಹಾಗೂ ಮಕ್ಕಳಿಗೆ ಪೌಷ್ಟಿಕ ಆಹಾರ ಸರಿಯಾಗಿ ಸಿಗುವಂತೆ ಮಾಡಲು ಸಂಬಂಧಪಟ್ಟ ಇಲಾಖೆಯೊಡನೆ ಸಮನ್ವಯ ಸಾಧಿಸುವುದು.

(19) ಗ್ರಾಮದ ಜನರಲ್ಲಿ ಹೆಣ್ಣು ಭ್ರೂಣ ಹತ್ಯೆ, ಬಾಲ್ಯ ವಿವಾಹ, ಅನಕ್ಷರತೆ, ಬಾಲ ಕಾರ್ಮಿಕ ಪದ್ಧತಿ ಹೋಗಲಾಡಿಸಲು ಕ್ರಮ ಹಮ್ಮಿಕೊಳ್ಳುವುದು.

8. ಗ್ರಾಮ ಆರೋಗ್ಯ, ನೈರ್ಮಲ್ಯ ಮತ್ತು ಪೌಷ್ಠಿಕ ಸಮಿತಿ ಮುಕ್ತ ನಿಧಿಯ ನಿರ್ವಹಣೆ.- (1) ಪ್ರತಿ ಗ್ರಾಮ ಆರೋಗ್ಯ, ನೈರ್ಮಲ್ಯ ಮತ್ತು ಪೌಷ್ಠಿಕ ಸಮಿತಿಗೆ ವಾರ್ಷಿಕ ಹತ್ತು ಸಾವಿರ ರೂಪಾಯಿಗಳ ಮುಕ್ತನಿಧಿ (ಅನಿರ್ಬಂಧಿತ ನಿಧಿ), ರಾಷ್ಟ್ರೀಯ ಆರೋಗ್ಯ ಅಭಿಯಾನದಿಂದ ನೀಡಲಾಗುವುದು.

(2) ಈ ನಿಧಿಯು ಸ್ಥಳೀಯ ಮಟ್ಟದಲ್ಲಿ ಕೈಗೊಳ್ಳುವ ಸಮುದಾಯ ಆರೋಗ್ಯ ಚಟುವಟಿಕೆಗಳಿಗೆ ಸಂಪನ್ಮೂಲವಾಗಿರುತ್ತದೆ. ಇದನ್ನು ಸಮುದಾಯ ಆರೋಗ್ಯ ಚಟುವಟಿಕೆಗಳಿಗೆ ಮಾತ್ರ ಒದಗಿಸಬೇಕು. ಈ ಚಟುವಟಿಕೆಗಳು ಒಂದು ಕುಟುಂಬಕ್ಕಿಂತ ಹೆಚ್ಚು ಕುಟುಂಬಗಳಿಗೆ ಅನುಕೂಲವಾಗುವಂತಿರಬೇಕು. ಈ ನಿಧಿಯನ್ನು ಬಳಸುವಾಗ ಜನಾರೋಗ್ಯ, ಪೌಷ್ಠಿಕತೆ, ಶಿಕ್ಷಣ ಮತ್ತು ನೈರ್ಮಲ್ಯ ಪರಿಸರ ಸಂರಕ್ಷಣೆಯಂತಹ ವಲಯಗಳಿಗೆ ಹೆಚ್ಚು ಆದ್ಯತೆ ನೀಡಬೇಕು.

(3) ಕೆಲವೊಂದು ಸಾಮಾನ್ಯ ಚಟುವಟಿಕೆಗಳಾದ ಗ್ರಾಮ ಮಟ್ಟದ ಸ್ವಚ್ಛತಾ ಚಟುವಟಿಕೆ, ನೈರ್ಮಲ್ಯ ಚಟುವಟಿಕೆಗಳು, ಆರೋಗ್ಯ ಚಟುವಟಿಕೆಗಳು, ಅಂಗನವಾಡಿ ಕೇಂದ್ರದ ಮಟ್ಟದ ಆರೋಗ್ಯ ಜಾಗೃತಿ ಕಾರ್ಯಕ್ರಮಗಳು, ಮನೆ ಮನೆ ಸಮೀಕ್ಷೆ, ರೋಗವಾಹಕ ಮೂಲಗಳನ್ನು ಕಡಿಮೆಗೊಳಿಸುವುದು, ತುರ್ತು ಸಮಯದಲ್ಲಿ ಸಾರಿಗೆ ವ್ಯವಸ್ಥೆ ಸೇವೆಗಳು (ಆರೋಗ್ಯ ಕವಚ ಸೇವೆ ಲಭ್ಯವಿಲ್ಲದಿದ್ದಲ್ಲಿ), ಮಾಹಿತಿ ಮತ್ತು ಶಿಕ್ಷಣ ಮತ್ತು ಸಂವಹನದ ಚಟುವಟಿಕೆಗಳು ಮತ್ತು ಕಾಲಕಾಲಕ್ಕೆ ಅಭಿಯಾನ ನಿರ್ದೇಶಕರು (ಎನ್‌ಹೆಚ್‌ಎಮ್) ಮತ್ತು ಯೋಜನಾ ನಿರ್ದೇಶಕರು (ಆರ್‌ಸಿಹೆಚ್) ನೀಡುವ ನಿರ್ದೇಶನದಂತೆ ಮುಕ್ತ ನಿಧಿಯನ್ನು ಬಳಸಬಹುದಾಗಿದೆ.

(4) ಈ ನಿಧಿಯನ್ನು ಸುತ್ತು ನಿಧಿಯನ್ನಾಗಿಯೂ ಬಳಸಬಹುದು. ಬಳಸುವ ಸಂದರ್ಭದಲ್ಲಿ, ಯಾವ ಕುಟುಂಬವು ಪಡೆದಿರುತ್ತದೆಯೇ, ಆ ಕುಟುಂಬದಿಂದ ಸಮಯಕ್ಕೆ ಸರಿಯಾಗಿ ವಂತಿಕೆಯನ್ನು ಕಂತುಗಳಲ್ಲಿ ಹಿಂಪಡೆಯಲು ಕ್ರಮ ಕೈಗೊಳ್ಳಬೇಕು.

(5) ವಿಶೇಷ ಸಂದರ್ಭಗಳಲ್ಲಿ ಅಂದರೆ ನಿರ್ಗತಿಕ ಮಹಿಳೆ ಅಥವಾ ಅತಿ ಬಡ ಕುಟುಂಬದವರಿಗೆ ಈ ನಿಧಿಯನ್ನು ನೀಡಿದ್ದರೆ, ಸಮಿತಿಯು ಚರ್ಚಿಸಿ ತೀರ್ಮಾನ ಕೈಗೊಂಡು ವಿನಾಯಿತಿ ನೀಡಬಹುದು.

(6) ಪ್ರತೀ ಸಮಿತಿಯು ಹತ್ತು ಸಾವಿರ ಮುಕ್ತ ನಿಧಿಯ ಜೊತೆಗೆ ಸಮಿತಿಯ ಉದ್ದೇಶಗಳನ್ನು ಈಡೇರಿಸಲು ಸಮುದಾಯದಿಂದ ವಂತಿಗೆಯನ್ನು ಪಡೆಯುವ ಸಂಪೂರ್ಣ ಸ್ವಾತಂತ್ರ್ಯವನ್ನು ಸಮಿತಿಯು ಹೊಂದಿರುತ್ತದೆ.

9. ಬ್ಯಾಂಕ್ ಖಾತೆಗಳ ನಿರ್ವಹಣೆ.- (1) ಸಮಿತಿಗೆ ನೀಡುವ ಮುಕ್ತ ನಿಧಿಯನ್ನು, ಈ ಸಮಿತಿಯು ರಾಷ್ಟ್ರೀಕೃತ ಅಥವಾ ಷೆಡ್ಯೂಲ್ಡ್ ಬ್ಯಾಂಕಿನ ಜಂಟಿ ಖಾತೆಗೆ ಜಮಾ ಮಾಡುವುದು.

(2) ಇದನ್ನು ಸಮಿತಿಯ ಸದಸ್ಯ ಕಾರ್ಯದರ್ಶಿ (ಆಶಾ ಕಾರ್ಯಕರ್ತೆ) ಮತ್ತು ಅಧ್ಯಕ್ಷರ ಜಂಟಿ ಸಹಿಯೊಂದಿಗೆ ನಿರ್ವಹಿಸಬೇಕು.

(3) ಜಂಟಿ ಖಾತೆಯ ನಿರ್ವಹಣೆಯನ್ನು ಸಂಪೂರ್ಣವಾಗಿ ಗ್ರಾಮ ಆರೋಗ್ಯ ಮತ್ತು ನೈರ್ಮಲ್ಯ ಸಮಿತಿ ಅದರಲ್ಲೂ ವಿಶೇಷವಾಗಿ ಆಶಾ ಕಾರ್ಯಕರ್ತೆಯ ಜವಾಬ್ದಾರಿಯಾಗಿರುತ್ತದೆ.

(4) ಗ್ರಾಮ ಆರೋಗ್ಯ, ನೈರ್ಮಲ್ಯ ಮತ್ತು ಪೌಷ್ಠಿಕ ಸಮಿತಿಯು ಸರ್ಕಾರದಿಂದ ಬಿಡುಗಡೆಯಾದ ಅನುದಾನ ಹಾಗೂ ಸಾರ್ವಜನಿಕರಿಂದ ಪಡೆದ ವಂತಿಗೆಯ ಖರ್ಚಿಗೆ ಸಂಬಂಧಿಸಿದಂತೆ ಪ್ರತ್ಯೇಕ ವಹಿಯನ್ನು ನಿರ್ವಹಿಸಬೇಕು.

(5) ಈ ವಹಿಯು ಸಾರ್ವಜನಿಕ ಪರಿಶೀಲನೆಗೆ (ಸಾಮಾಜಿಕ ಪರಿಶೋಧನೆ) ಮುಕ್ತವಾಗಿರಬೇಕು.

